TIGHT BINDING BOOK

TEXT FLY WITHIN THE BOOK ONLY

THE BOOK WAS DRENCHED

UNIVERSAL LIBRARY

OU_200599

UNIVERSAL LIBRARY

ಶ್ರೀರಸ್ತು.

# ಸಾವಿತ್ರಿಯ ಚರಿತ್ರೆ.

## ೧ನೆಯ ಆಶ್ವಾಸ.

೧. ಶ್ರೀಗಿರೀಂದ್ರಸುತಾಸುಪುತ್ರನೆ ।
ನಾಗಸುರನರನುತಚರಿತ್ರನೆ ।
ಭೋಗಿಭೂಷಪ್ರೇಮಪಾತ್ರನೆ ಯೋಗಮೋಕ್ಷದನೇ
ರೋಗಿಜನಹೃದಯಾಬ್ಜಮಿತ್ರನೆ ।
ವಾಗಗೋಚರಗುಣಪವಿತ್ರನೆ ।
ಬೇಗದಿಂದಲಿ ಸಲಹು ಸನ್ಮತಿಯಿತ್ತು ಗಜಮುಖನೇ

೨. ಸಿರಿಗೆ ತೌರೂರೆನಿಪ ಮಹೀಸುರ ।
ಪುರದಿ ಸಿಂಹಾಸನವ ಮಂಡಿಸಿ ।
ಪರಮಧರ್ಮದಿ ಪಾಲಿಸುತ ಕರ್ಣಾಟಜನಪದವ ॥
ಮೆರೆಯುತಿರ್ಪನುದಾರನಾಶ್ರಿತ ।
ಶರಣ ಸುಗುಣಾಭರಣ ವಿದ್ಯಾ ।
ರಧಿವರ್ಧನಚಂದ್ರಸುಯಶಸ್ಸಾಂದ್ರ ಚಾಮೇಂದ್ರ ॥

೩. ಈ ಮಹೀವಲ್ಲಭಗೆ ತಾನು ।
ಧಾಮಸನ್ನಿಧಿಸಚಿವನಾಗಿ ನಿ ।
ಕಾಮವೆನೆ ಲೋಕೋಪಕೃತಿಯೊಳು ನಿರತನೆಂದೆನಿಸಿ ॥
ಸೌಮನಸ್ಯವನಾಂತು ಸುಯಶ ।
ಕಾಮನಾಗಿರುತಿರ್ದ ವಿದ್ವ ।
ತ್ಸ್ತೋಮ ನರಸಿಂಹಾರ್ಯನಾಮಕಭೂಸುರೋತ್ತಮನು ॥

೪. ಬಾಲಿಕಾಜನಕವನಿತೆಯರೊಳು ।
ಮೇಲೆನಿಪ ಪತಿಭಕ್ತಿ ಮುಖ್ಯಗು ।
ಣಾಳಿ ಬೋಧಿಸುವ ಸಾವಿತ್ರಿಯ ಮಹಾಕಥೆಯ ॥
ಕೇಳಿದೊಡನೆಯೆ ಮನವು ಹಿಡಿಯುವ ।
ಶೈಲಿ ತಿಳಿಗನ್ನಡದ ನುಡಿಯೊಳು ।
ಪೇಳಿರೆನ್ನುತ ಕರಂ ಪ್ರೋತ್ಸಾಹಪಡಿಸಲ್ಕೆ ॥

೫. ಆಮಹಾಭಾರತದೊಳಗಿವು ।
ಧಾಮಪಾತಿವ್ರತ್ಯಸದ್ಗುಣ ।
ನಾಮಯುತ ಸಾವಿತ್ರಿಯ ಮಹಾ ಪುಣ್ಯಚರಿತೆಯನು ॥
ಭಾಮಿನೀಷಟ್ಪದಿಗಳಿಂದಭಿ ।
ರಾಮವೆನೆ ಕನ್ನಡದಿ ಪೇಳ್ದನು ।
ಚಾಮನೃಪನಾಸ್ಥಾನಕವಿ ಬಸವಪ್ಪ ಶಾಸ್ತ್ರಿಯೊದ ॥

೬. ಆ ಯುಧಿಷ್ಠಿರನೃಪಗೆ ಮಾರ್ಕಂ ।
ಡೇಯಮುನಿ ಸಂಕ್ಷೇಪದಲಿ ರಾ ।
ಮಾಯಣವ ಪೇಳ್ದೊಡನೆ ಸಾವಿತ್ರಿಯ ಮಹಾ ಕಥೆಯ ॥

ಆಯುತವೆನಲು ಪೇಳಿದನು ಕೇಳ್ |
ರಾಯನೀನೆಂದನುತ ವ್ಯೆರಂ |
ಪಾಯಸನನು ಜನಮೇಜಯ ಕ್ಷಿತಿನಾಥಗಿಂತೆಂದ |

೩ ಕೇಳು ಧರ್ಮಜ ಮುಖ್ಯರೆಂತ |
ನಾಳುತಿರ್ದನಪೋರ್ವದನವನಿ |
ಪಾಲಪುಂಗವನ್ಯಪತಿಯೆಂದೆಂಬ ಪಾರ್ಥಿವನು ||
ಪೇಳಲೇನವನ ಸದ್ಗುಣ |
ಶಾಲಿ ನೀತಿವಿಶಾರದನು ಸುವಿ |
ಶಾಲಕೀರ್ತಿ ವೇದಾಂತಜ್ಞನು ವಾದಮತಿಯುತನು ||

೪ ಸತ್ಯಸಂಧ ಜಿತೇಂದ್ರಿಯನು ದು |
ಷ್ಕೃತ್ಯವಿಮುಖನು ಬ್ರಾಹ್ಮಣಪ್ರಿಯನು |
ನತ್ಯಧಿಕವಿನಯಾನ್ವಿತನು ಲೋಕೋಪಕೃತಿರತನು ||
ನಿತ್ಯದೇವಾರ್ಚನಪರನು ಸಾ |
ಹಿತ್ಯವಿದನಾನ್ವಿತ ಯೋಗ್ಯ |
ಮಾತ್ಯರೊಡನವನಿಯನು ಪಾಲಿಸುತಿರ್ದನೊಲವಿನಲಿ ||

೫ ಕೇಳು ಜನಪತಿ ತನ್ನೃಪನ ಸತಿ |
ಮಾಳವೀನಾಮದಲಿ ಮೆರೆವಳು |
ಕೋಲಿಸಲು ಸೌಂದರ್ಯದೊಳು ಶ್ರೀದೇವಿಗೆಣೆಯಹಳು ||
ಪೇಳಲಸದಳವವಳ ಗುಣವ ಸು |
ಶೀಲೆ ಪತಿಗನುಕೂಲೆಯಾಶ್ರಿತ |
ಪಾಲೆ ಗುಣಮಣಿಮಾಲೆ ಕರುಣಾಪಾಲೆಯಾಲೋಲೆ |

೧೦. ಜನಪ ಕೇಳಾಕಾಂತೆ ಮಕ್ಕಳು ।
ತನಗುದಿಸಲಿಲ್ಲೆಂದು ಚಿಂತಾ ।
ವನಧಿಯೊಳು ಮಿಗೆಮುಳುಗಿಹುದನರಿದವನಿಪತಿತಾನು ॥
ಇನಿಯಳನು ಬೆಸಗೊಂಡನೇತಕೆ ।
ಮನದ ದುಗುಡವಿದೆಂದು ಬಳಿಕಾ ।
ವನಿತೆ ಕಂಬನಿದುಂಬಿ ನುಡಿದಳು ತನ್ನ ಪತಿಯೊಡನೆ ॥

೧೧. ಭೂಮಧೂವಲ್ಲಭನೆ ನಿನ್ನನು ।
ಕೈವಿಡಿದ ನನಗೇನು ಕೊರತೆ ಮ ।
ಹಾವಿಭವದೊಳು ಬಾಳ್ವೆನಾದೊಡಮೇನನುಸಿರ್ದಪೆನು ॥
ಭೂವಿನುತನಹ ಸುತನ ಪಡೆದು ಮ ।
ನೋವಿನೋದವನಾಂಪ ಪುಣ್ಯವ ।
ನಾವು ತರಲಿಲ್ಲೆನುತ ಕಂಬನಿದುಂಬಿದಳು ಕಾಂತೆ ॥

೧೨. ತೂಗುದೊಟ್ಟಿಲೊಳಿಟ್ಟು ಮಗುವನು ।
ಜೋಗುಳವ ಹಾಡುತ್ತ ಮಲಗಿಸಿ ।
ರಾಗದಿಂ ಮನೆಗೆಲಸಗಳ ಮಾಳ್ಪನಿತರೊಳಗೆದ್ದು ॥
ಕೋಗಿಲೆಯ ದನಿಯಣುಗನಳಲೊಡ ।
ನಾಗ ಬಂದೆದೆಯೂಡಿ ನೇಹದಿ ।
ಸೋಗಿಲೊಳಗಿಟ್ಟಾಡಿಸುವಳೇಂ ಧನ್ಯಳೋ ಜಗದಿ ॥

೧೩. ವನಜಗಂಧಿಯೆ! ನಿನ್ನ ನುಡಿ ನಿಜ ;
ವಿನಯಹೀನನ ವಿದ್ಯೆಯುಂ ನಂ ।
ದನನ ಪಡೆಯದ ನರನ ಸಿರಿಯುಂ ಜಗದಿ ನಿಷ್ಫಲವು ॥

ವನಿತೆ "ಸಾಪುತ್ರಸ್ಯ ಗತಿಃ" ಯೆಂ ।
ದೆನುತೊರೆವುದಾ ಶಾಸ್ತ್ರಯುವದರಿಂ ।
ತನಯನುದಿಸಲೆಂದು ಮಾಡುವ ಸೇವೆ ಕೇಳಿರದ

೧೪. ಪರಸುಖ ನಿಗ್ರಹ ವ್ರತದಾ ।
ಚರಿಸಿದನೆ ಹಿತ ವಿಧಾನವ್ರ ।
ದೊರಕುವುದು ಪುತ್ರನೆಂದು ಶಾಸ್ತ್ರಕೋವಿದರೆನುವರು ॥
ವಿರಚಿಸುತೆನಿದ ಭಕ್ತಿಯಿಂದತಿ ।
ತರುಣಿ ಕೇಳ್ ಸಾವಿತ್ರಿದೇವಿ ತಾಂ ।
ಕರುಣಿಸುವಳೆಂತೆನುತ ನಿಲ್ಲು ಸಂತೈಸಿಕೊಳ್ಳುತಿದ ।

೧೫. ಅರಸ ಕೇಳ್ವ ಬಳಿಕಲಾಭೂ ।
ವರನಮಲಸುಬ್ರಹ್ಮಚರ್ಯದೊಳು ।
ಇರುತ ಕಲ್ಪೋಕ್ತ ಪ್ರಕಾರದೊಳುಕ್ತಕಾಲದೊಳು ।
ನಿರಶನವ್ರತದಿಂದ ಬಿಡದಾ ।
ಚರಿಸುತರ್ಚನೆ ಲಕ್ಷಹೋಮವ ।
ನರರೆ ಸಾವಿತ್ರಿಯು ಕುರಿತು ಸಂತಾನಕಾಂಕ್ಷೆಯಲಿ ॥

೧೬. ಆಮಹೀಪತಿ ತನ್ನದೇವರಿ ।
ನೇಮದಿಂದಾಚರಿಸುತಿರೆ ಕೇಳ್ ।
ಸೋಮಕುಲಜನೆ ಕಳೆದವೈ ಹದಿನೆಂಟು ವರುಷಗಳು ॥
ಆಮಹಾಸಾವಿತ್ರಿ ಮೆಚ್ಚುತ ।
ಹೋಮಕುಂಡಾಂತರದೆ ತನ್ನಯ ।
ರಾಮಣೀಯಕವಾಂತ ರೂಪವ ತೋರಿದಳು ನೃಪಗೆ ॥

೧೭. ಜಯ ಮಹಾಸಾವಿತ್ರಿ ಜಯ ಜಯ।
ಜಯ ಜಗಜ್ಜನಯಿತ್ರಿ ಜಯ ಜಯ ।
ಜಯಮನೋರಥದಾತ್ರಿ ಜಯ ಜಯ ಭಜಕಜನಧಾತ್ರಿ ॥
ಜಯ ಜಯ ಮಹಾದೇವಿ ನಿನ್ನಂ ।
ಪ್ರಿಯನು ಕಂಡು ಕೃತಾರ್ಥನಾದೆನು ।
ಭಯನಿವಾರಿಣಿ ಪಾಲಿಸೆಂದೆರಗಿದನು ಭಕ್ತಿಯಲಿ ॥

೧೮. ಮೆಚ್ಚಿದೆನು ನೃಪತಿಲಕ ನಿನ್ನಯ ।
ಸಚ್ಚರಿತಸುಬ್ರಹ್ಮಚರ್ಯಕೆ ।
ನಿಚ್ಚಲುಂ ನೀಂ ನಡಸಿದೀಜಪಹೋಮದಾನಕ್ಕೆ ॥
ಮೆಚ್ಚಿದೆನು ಬೇಕಾದ ವರಗಳ ।
ನುಚ್ಚರಿಸು ನಾಂ ಕೊಡುವೆನೆನೆ ಕೇ ।
ಳ್ದಚ್ಚರಿಯ ತಾಳುತ್ತಲಾನೃಪನೆರಗಿ ತತ್ಪದಕೆ ॥

೧೯. ತಾಯೆ ಸಂತಾನವೆ ಮನುಷ್ಯನಿ ।
ಕಾಮುಕಿಗ ವರಗಳಲಿ ವಿಪುಲ ।
ಶ್ರೇಯವನು ಮಾಡುವುದೆನುತ ಮುನಿವರರು ನುಡಿವುದರಿಂ।
ಈಯಬೇಕೌ ಬಹುಸುತರ ಮುನಿ ।
ಗೇಯೆ ನೀಂ ದಯದಿಂದಲೆನ್ನನು ।
ಕಾಯಬೇಕೆಂದೆರಗಿದನು ಸಾವಿತ್ರಿಯಡಿಗಳಿಗೆ ॥

೨೦. ಎಲೆ ನೃಪತಿ ನಿನ್ನಿಷ್ಟವನು ನಾಂ ।
ತಿಳಿದಿರುವೆನ್ನೈ ಕೇಳು ನಿನ್ನಯ ।
ಬಲನೆಯುದರದೊಳೊಂದು ಕನ್ಯಾರತ್ನವುದಿಸುವುದು ॥

ಸಲಿಸಿರುವೆನೀವರವ ಮನದೊಳು ।
ಕಳವಳಿಸಬೇಡೆಂದು ನುಡಿದಾ ।
ಬಳಿಕಲಂತರ್ಧಾನನನು ಹೊಂದಿದಳು ಸಾವಿತ್ರಿ ॥

೨೧. ವರಯುಧಿಷ್ಠಿರನೃಪತಿ ಕೇಳೀ ।
ಪರಿ ವರವ ಪಡೆದಶ್ವಪತಿ ಬಲು ।
ಹರುಷದಿಂದಂತಃಪುರವನೊ ಹೊಕ್ಕು ಕಾಂತೆಯೊಳು ।
ವರದ ಪರಿಯನು ತಿಳುಹಿ ಧರ್ಮದಿ ।
ಧರಣಿಯನು ಪರಿಪಾಲಿಸುತ ತಾ ।
ನಿರಲತಿಕ್ರಮಿಸಿದ್ದುವು ಕೆಲವು ದಿನಂಗಳಾಬಳಿಕ॥

೨೨ ಧರಿಸಿದಳು ಗರ್ಭವನು ತದಷ್ಟ ।
ವರನ ಸತಿ ಸಿತಪಕ್ಷಚಂದ್ರನ ।
ತೆರದಿ ಗರ್ಭವು ದಿನದಿನಕ್ಕಭಿವೃದ್ಧಿಯನು ಪಡೆಯೆ ॥
ಹರಿಸ ಮಿಗೆ ನವಮಾಸ ತುಂಬಲು ।
ಶರಧಿಯೊಳು ಸಿರಿ ಜನಿಸಿದಂತಾ ।
ಅರಸಿಯುದರದಿ ಹೆಣ್ಣು ಮಗು ಪುಟ್ಟಿತು ಸುಲಗ್ನದಲಿ ॥

೨೩. ಎಲೆ ನೃಪತಿ ಕೇಳಶ್ವಪತಿಯಾ ।
ಬಳಿಕ ಸಾವಿತ್ರಿಯ ವರದಿ ನಿಜ ।
ಕುಲದೊಳುದಿಸಿದ ಪುಣ್ಯಲಕ್ಷಣಕನ್ಯಕಾಮಣಿಗೆ ॥
ಬಳೆಸಿ ಮುದದಿಂ ಜಾತಕರ್ಮವ ।
ನಲವಿನಿಂ ಸಾವಿತ್ರಿಯೆಂದೇ ।
ಲಲನೆಯಿಂದೊಡಗೂಡಿ ಗೆಯ್ದನು ನಾಮಕರಣವನು ॥

೨೪. ನಗೆಮೊಗದ ತೊಳಗುವ ಕಪೋಲದ ।
ಚಿಗುರನಣಕಿಪ ಕರತಳದ ಸಂ ।
ಪಗೆಯ ಪೋಲುವ ನಾಸಿಕದ ಪೊಗರುಗುವ ಚೆಂದುಟಿಯ ॥
ಬೊಗಸೆಗಣ್ಣಿನ ತುಂಬಿಗುರುಳಿನ ।
ಮಗಳ ಚೆಲುವಿಕೆಯನು ನಿರೀಕ್ಷಿಸಿ ।
ಬಗೆಯೊಳಾನಂದಿಪರು ಜನನೀಜನಕರಡಿಗಡಿಗೆ ॥

೨೫. ನೋಡಿ ದಣಿಯರು ಮಗಳ ಸಿಂಗರ ।
ಮಾಡಿ ದಣಿಯರು ನೇಹ ಮಿಗೆ ಮು ।
ದ್ದಾಡಿ ದಣಿಯರು ಮನದೊಳಡಿಗಡಿಗಣುಗಿ ಬೇಡಿದುದ ॥
ನೀಡಿ ದಣಿಯರು ನಿಚ್ಚಲವಳೊಡ ।
ನಾಡಿ ದಣಿಯರು ಹರುಷಗಡಲೊಳು ।
ಮೂಡಿ ಮುಳುಗುವರವಳ ಜನನೀಜನಕರನವರತ ॥

೨೬. ಬಾಲೆ ಬಾಲೇಂದುವಿನ ತೆರದೊಳು ।
ತಾಳುತಿರಲಭಿವೃದ್ಧಿಯನು ಭೂ ।
ಪಾಲನಖಿಲಕಳೆಯನರಿದುಪಾಧ್ಯಾಯನನು ಬರಿಸಿ ॥
ಮೇಲೆನಿಪ ಮನ್ನಣೆಯ ಮಾಡಿ ವಿ ।
ಶಾಲಮತಿಗಳೆ ನಮ್ಮ ಕುವರಿಗೆ ।
ಹೇಳುವುದು ವಿದ್ಯೆಯನೆನುತ್ತಾತ್ಮಜೆಯೊಳಿಂತೆಂದ ॥

೨೭. ಜನನಿಯಂದದಿ ಪೋಷಿಸುವುದಾ ।
ಜನಕನಂದದಿ ವಿಹಿತಕಾರ್ಯದೊ ।
ಳನುಗೊಳಿಸುವುದು ಮಿತ್ರನೋಲ್ ದುಃಖವನು ಪರಿಹರಿಸಿ ॥

ಘನವ ನಿಂತೊಳ್ಳಿಪ್ಪುದು ಕೀರ್ತಿಯು |
ಜನಿಯಿಪುದು ಸಂಪದವನೀವುದು |
ತನುಜೆ ಕೇಳೌ ವಿದ್ಯೆ ಸಾಕ್ಷಾತ್ಕಲ್ಪಲತೆಯೆಂದ ||

೨೮. ತರಳೆ ಕೇಳ್ ನಿನಗಿವರು ವಿದ್ಯಾ |
ಗುರುಗಳಿವರ್ಗೆ ವಿನೀತೆಯಾಗಿವ |
ರೊರೆದ ವಿದ್ಯಾಬುದ್ಧಿಗಳ ಕಲಿತೊಂದುವೇಳೆಯಲಿ ||
ಗುರುಗಳಾಗ್ರಹಿಸಿದರೆ ನನಗಿದು |
ಪರತರಾನುಗ್ರಹವೆನುತ ನೀ |
ನರಿದು ನಡೆಯೆನುತೆರಗಿಸಿದನಾಚಾರ್ಯಗಾತ್ಮಜೆಯು ||

೨೯. ಹೇಳಿದನುಪಾಧ್ಯಾಯನಾ ನೃಪ
ಬಾಲೆಗನುನಯದಿಂದ ವಿದ್ಯೆಯು |
ಹೇಳಲರಿದವಳುರುತರಪ್ರತಿಭಾವಿಶೇಷವನು ||
ಕೇಳಿದೊಡನೆಯೆ ಬಹುದು ಗುರು ತಾಂ |
ಹೇಳಿಕೊಡುತಿಹ ವಿದ್ಯೆಯಾಕೆಯು |
ಮೇಲುಮತಿಗಾಚಾರ್ಯನಚ್ಚರಿವಡುವನಡಿಗಡಿಗೆ ||

೩೦. ಗುರುಗಳುಸಿರಿದ ಪಾಠವನು ತಾಂ |
ಪರಮಭಕ್ತಿಯೊಳಾಲಿಸುವಳಾ |
ದರದಿ ಪಠಿಪಳು ಮನದೊಳದನಡಿಗಡಿಗೆ ಭಾವಿಪಳು ||
ಪರಿಪರಿಯ ಬಾಲ್ಯೋಚಿತಕ್ರಿಯೆ |
ಗೆರಗುತಿಹ ಮನವನ್ನು ಬಲುಹಿಂ |
ತಿರುಗಿಪಳು ವಿದ್ಯೆಯೊಳು ಪ್ರಗುಣೆಯಾದ ಸಾವಿತ್ರಿ ||

೩೧. ಮನದಿ ವಿದ್ಯಾಗುರುಗಳನು ನಿಜ|
ಜನಕನಂದದಿ ಭಾವಿಸುತ ಬಲು |
ವಿನಯದಿಂದಲಿ ನಡೆವಳಾಜ್ಞೆಯ ಮೀರದಿಹಳವರಾ ||
ಇನಿಸು ಬೇಸರವಡದೆ ವಿದ್ಯೆಯ |
ನನುದಿನವು ಕಲಿಯುತ್ತಲಿರ್ದ್ದಳು |
ಘನಗುಣಾನ್ವಿತೆಯಾದ ತನ್ನೃಪಪುತ್ರಿ ಸಾವಿತ್ರಿ||

೩೨. ಕೇಳು ನೃಪ ಸಾಹಿತ್ಯವೊದಲಾ |
ದಾಲಲಿತವಿದ್ಯೆಗಳ ಕಲಿತಳು |
ಮೇಲೆನಿಪ ನಿಜಕೌಶಲಕೆ ಗುರು ಮೆಚ್ಚುವಂದದಲಿ ||
ಬಾಲೆ ವಿದ್ಯಾನಿಪುಣೆಯಾದುದ |
ಕೇಳುತವಳ ಪರೀಕ್ಷಿಸುತ ಮಿಗೆ |
ತಾಳಿದನು ಸಂತೋಷವನು ತಜ್ಜನಕನಡಿಗಡಿಗೆ ||

೩೩. ಧರಿಸಿದಳು ಯೌವನವನವಳದ |
ನೊರೆವುದಿನ್ನೇಂ ವರನ ವರಿಸೆಂ |
ದೊರೆವುವೆನೆ ಶೋಭಿಸಿದುವಾಕರ್ಣಾಯತಾಕ್ಷಿಗಳು ||
ವರಮಣಿಗಳನು ಕುಂದಣದಿ ಬಿಗಿ |
ದಿರಿಸಿದಂತಾಯ್ತುವಯುವದ ಛಾ|
ಸುರತಯೋರುಂಜವ್ವನದಿ ತರುಣೀಶಿರೋಮಣಿಯಾ ||

೩೪. ರತಿಯ ಸುವಿಲಾಸಗಳನಾಭಾ |
ರತಿಯ ವಾಕ್ಚತುರತೆಯನಾಹರಿ |
ಸತಿಯ ಸೌಭಾಗ್ಯವನು ನೆರೆ ಹೋಲುವುವು ನೃಪಸುತೆಯ||

ತಿಶಯಿತಸುವಿಲಾಸಸರಸೋ ।
ಶತವಚನಸೌಭಾಗ್ಯಗಳು ತ ।
ೃತಿಯನೇಂ ವರ್ಣಿಸುವೆನ್ಯೆ ಭೂಪಾಲ ಕೇಳೆಂದ ॥

೩೪. ಅವಳ ವರಿಸಲು ತವಕ ಮಿಗೆ ಬಂ ।
ದವನಿಪಾಲಕುಮಾರರೀಕ್ಷಿಸು ।
ತವಳವನಿಗಿಳಿತಂದ ನಿರ್ಜರಯುವತಿಯೋ ರತಿಯೋ ॥
ಇವಳು ಸಾಕ್ಷಾಲ್ಲಕ್ಷ್ಮಿಯೋ ಮೇಣ್ ।
ಿವರಿಸುವೊಡರಿದೆಂದು ಮನದೊಳು ।
ತವತವಗೆ ಬೆರಗಾಗುತಿರ್ದರು ಜನಪ ಕೇಳೆಂದ ॥

೩೫. ಅರಸ ಕೇಳ್ಳನೃಪಕುಮಾರರು ।
ತರಣಿಕೋಟಿಸಮಾನತೇಜದಿ ।
ಮಿರುಗುತಿಹ ಸಾವಿತ್ರಿಯಿರವನು ನೋಡಿ ಬೆರಗಾಗಿ ॥
ಹರಹರಾ ನಾವೀ ವಧೂಟಿಯು ।
ವರಿಸುವುದಕೆ ಸಮರ್ಥರಲ್ಲೆಂ ।
ದಿರದೆ ತಂತಮ್ಮೂರಿಗೆಯ್ದಿದರಂದು ಮೌನದಲಿ ॥

೩೬. ಬಂದು ಬಂದೈದುತಿರೆ ನೃಪಸುತ ।
ವೃಂದವಾಕನ್ಯಾಶಿರೋಮಣಿ ।
ಯೆಂದಿಗೆನಗನುರೂಪವರ ದೊರಕುವನೊ ತಾನೆನುತ ॥
ದಂದುಗವ ಪಡುತಿರಲು ಬಳಿಕಲಿ ।
ಸಂದಿಸಲು ವರಪರ್ವಕಾಲವು ।
ಮಿಂದು ಭಕ್ತಿಯೊಳಿಷ್ಟದೇವತೆಯರ್ಚನೆಯನೆಸಗಿ ॥

೩೮. ಮದನನಾನಂತರದೊಳಾನೃಪ ।
ನಂದನೆಯು ದೇವತಸ್ನಾವನ ।
ನೊಂದುತಟ್ಟೆಯೊಳಿರಿಸಿಕೊಂಡತಿಭಕ್ತಿಯೊಳು ತನ್ನ ॥
ತಂದೆಯೆಡೆಗೆಯ್ತಂದು ಚರಣಕೆ ।
ಮಾಡಿಸುತಲೀ ಸುಸ್ನಾವನ ।
ತಂದೆ ಕೈಕೊಳ್ಳುವುದೆನುತ ಕೈಗಿತ್ತು ನಿಂದಿರಲು ॥

೩೯. ವಿನಯದಿಂ ತಲೆವಾಗಿ ತನ್ನಯ ।
ಸನಿಹದೊಳು ನಿಂತಿರುವ ನವಯೌ ।
ವನವಿಲಾಸವನೀಜ್ಞಯಾಗಿಹ ಮಗಳನೀಕ್ಷಿಸುತ ॥
ತನುಜೆ ಬಾ ಮದ್ವಂಶವಾರಿಧಿ ।
ಜನಿತಲಕ್ಷ್ಮಿಯೆ ಬಾರೆನುತ ಲೋ ।
ಚನಸುಖಾಶ್ರುಗಳಿಂದಭಿಷೇಕಿಸಿದನಾತ್ಮಜೆಯ ॥

೪೦. ಸೊಕ್ಕುಜವ್ವನೆಯವಳಾಗಿಯು ।
ತಕ್ಕವರನಾವನು ವರಿಸಲಿ ।
ಲ್ಲಕ್ಕಟಾ ಏಗೆಯ್ವೆನೆನ್ನುತ ತನ್ನ ಮನದೊಳಗೆ ॥
ಕಕ್ಕುಲಿತೆಯನು ಪಡೆವ ಕುವರಿಯ ।
ನಕ್ಕರಿಂದಲಿ ನೋಡಿ ಮನದೊಳ ।
ವ್ರೊಕ್ಕಭಿಪ್ರಾಯವನು ಪೇಳಿದನಶ್ವಪತಿ ಸುತೆಗೆ ॥

೪೧. ಎಲೆ ಮಗಳೆ ಕುಲಶೀಲರೂಪಿನೊ ।
ಗಳಲಿ ನಿನಗನುರೂಪವರನನು ।
ನೆಲದೊಳಿರುತಿಹ ನೃಪಕುಮಾರರೊಳರಸುತಲಿ ನೀನೆ ॥

ತಿಳಿಸಿದೊಡೆ ನಿನ್ನಾಶಯವ ನಾಂ ।
ಬಳಿಕವನ ಪರಿಯನು ವಿಚಾರಿಸಿ ।
ಕುಲಮಣಿಯೆ ಪರಿಣಯವ ಮಾಡುವೆ ನಿನಗೆ ನಾನೆಂದ ॥

೪೨. ಇದನು ನೀಂ ಮಾಡದಿರೆ ನಾಂ ಲೋ ।
ಕದೊಳು ನಿಂದೆಗೆ ಗುರಿಯಹೆನು ಕೇ ।
ಳುದಿತಯೌವನಸುತೆಗೆ ಮದುವೆಯ ಮಾಡದಿಹ ಪಿತನು ॥
ಮದುವೆಯಾದಂಗನೆಯ ಕಾಪಾ ।
ಡದ ಪತಿಯು ಪತಿಯುಳಿದ ತಾಯನು ।
ಮುದದಿ ಸಲಹದ ಸುತನು ನಿಂದ್ಯರು ಮೂವರಿವರೆಂದು ॥

೪೩. ಸೊಲ್ಲಿಪರು ಕೇಳ್ ಧರ್ಮಶಾಸ್ತ್ರವ ।
ಬಲ್ಲ ವಿಬುಧೋತ್ತಮರು ನೀನಿದ ।
ನೆಲ್ಲವನು ತಿಳಿದಿರ್ಪೆ ವಿದ್ಯಾವತಿಯಲಾ ನೀನು ॥
ಸಲ್ಲಲಿತಗುಣೆ ತಕ್ಕ ಧರಣೀ ।
ವಲ್ಲಭಕುಮಾರನ ವರಿಸಿ ಜಗ ।
ದಲ್ಲಿನಗೆ ಬಹ ನಿಂದೆಯನು ನೀಂ ತಪ್ಪಿಸುವುದೆನುತ ॥

೪೪. ಜನಪ ತನ್ನಯ ವೃದ್ಧಮಂತ್ರಿಗ ।
ಳನು ಕರೆದು ಮಗಳೊಡನೆ ಪೋಗುವು ।
ದೆನುತಲಾಜ್ಞೆಯನಿತ್ತು ವರನನು ಹುಡುಕೆ ನಿಜಸುತೆಯ ॥
ಕನಕರಥದೊಳು ಕುಳ್ಳಿರಿಸಿ ಪರಿ ।
ಜನದೊಡನೆ ಬೀಳ್ಕೊಡಲು ತನ್ನಯ ।
ಜನಕನಂಘ್ರಿಗೆ ನಮಿಸಿ ಗಮಿಸಿದಳೆಂದು ಸಾವಿತ್ರಿ ॥

೪೫. ಎಲ್ಲಿ ರಾಜರ್ಷಿಗಳು ವಾಸಿಪ |
ಸಲ್ಲಲಿತ ಪುಣ್ಯಾಶ್ರಮಂಗಳು |
ಎಲ್ಲಿ ಪಾವನತರ ತಪೋವನವೊಪ್ಪುತಿರುತಿಹುವೊ ||
ಅಲ್ಲಿಗಲ್ಲಿಗೆ ಪೋಗಿ ತೀರ್ಥಗ |
ಳಲ್ಲಿ ಮುಳುಗಿ ಮಹರ್ಷಿಗಳ ಪದ |
ಪಲ್ಲವಕ್ಕಭಿನಮಿಸುತವರಾಶೀರ್ವ್ವಚನವಾಂತು ||

೪೬. ಪುಣ್ಯತೀರ್ಥಕ್ಷೇತ್ರದೆಡೆಯೊಳ |
ಗಣ್ಯವೆನೆ ರತ್ನಾಂಬರಾದಿ ಹಿ |
ರಣ್ಯಗಳನಾಶ್ರಮನಿವಾಸಿ ಬ್ರಾಹ್ಮಣರ್ಗಿತ್ತು ||
ಗಣ್ಯರಾದವನಿಪಕುಮಾರವ |
ರೇಣ್ಯರೊಳು ತಕ್ಕವನನಾಲಾ |
ವಣ್ಯನಿಧಿಯರಸುತ್ತ ಸಂಚರಿಸಿದಳು ಸಾವಿತ್ರಿ ||

---

## ೨ನೆಯ ಆಶ್ವಾಸ

---

ಸೂಚನೆ || ಮನದಿ ವರಿಸಿದ ಸತ್ಯವಂತನೆ |
ತನಗೆ ಪತಿಯೆಂದೆಂಬ ನಿಜಸುತೆ |
ಯನುಮತದೊಳಾತಂಗೆ ಮದುವೆಯ ಗೆಯ್ದ ನಶ್ವಪತಿ

೧. ಇಂದುಕುಲಭೂಷಣನೆ ನೀಂ ಕೇ |
ಳೊಂದು ದಿನವಾ ಅಶ್ವಪತಿ ನೃಪ |
ನಂದದಿಂದೊಡ್ಡೋಲಗದೊಳಿರುತಿರ್ದಸಮಯದಲಿ ||

ಬಂದನಲ್ಲಿಗೆ ವೀಣೆಯನು ನಲ।
ವಿಂದ ನುಡಿಸುತಲಂಬರಸ್ಥಲ।
ದಿಂದ ಬರುತಿಹ ಶುಭ್ರನೀರದವೆನಲು ನಾರದನು॥

೨. ಕಂಡು ತನ್ನುನಿವರನನಾಭೂ।
ಮಂಡಲಾಧಿಪನೆದ್ದು ತತ್ಪದ।
ಪುಂಡರೀಕಕ್ಕೆರಗಿ ಪೀಠವನಿತ್ತು ಸತ್ಕರಿಸಿ॥
ಖಂಡಿಸಿದುದೆಮ್ಮಘನಿಕರವಾ।
ಖಂಡಲಾರ್ಚಿತ ನಿಮ್ಮ ಚರಣವ।
ಕಂಡುದರಿಂದೆಂದರಸ ನುಡಿದನು ವಿನಯವಚನದಲಿ॥

೩. ಆಸಮಯದಲಿ ಬಂದಳೊಡನೆ ಮ।
ಹಾಸಚಿವರ್ಕೆತರಲು ಪುಣ್ಯಾ।
ವಾಸವೆನಿಪ ತಪೋವನಂಗಳ ಚರಿಸಿ ಸಾವಿತ್ರಿ॥
ಲೇಸು ಮಿಗೆ ಮುನಿಪತಿಯೊಳವನೆ ಭ।
ದ್ರಾಸನದಿ ಕುಳಿತಿರ್ದ ತಂದೆಯು।
ಭಾಸುರಾಂಗಿ ನಿರೀಕ್ಷಿಸುತ ವಂದಿಸಿದಳಿರ್ವರಿಗೆ॥

೪. ಎರಗಿದಾಸಾವಿತ್ರಿಯನು ಮುನಿ।
ವರಸುತೆಲಿ ಜನನಾಥ ನಿನ್ನಯ।
ತರಳೆ ತಾಂ ಪೋಗಿರ್ದಳೆಲ್ಲಿಗೆ ಬಂದಳೆಲ್ಲಿಂದ॥
ಅರುಹು ಯೌವನವಾಂತ ಕನ್ಯೆಗೆ।
ವರನ ನೋಡಿ ವಿವಾಹವನು ನೀಂ।
ವಿರಚಿಸದ ಕಾರಣವದೇನೆಂದೆನುತ ಬೆಸಗೊಂಡ॥

೫. ಸುರಮುನಿಪ, ಲಾಲಿಸು ಮದಾಜ್ಞೆಯು ।
ಧರಿಸಿ ಶಿರದೊಳು ತಕ್ಕ ವರನನು ।
ವರಿಸುವೊಡೆ ಪೋಗಿರ್ದಳೀಗಳೆ ಬಂದಳೆನ್ನೆಡೆಗೆ ॥
ತರಳೆಯನೆ ಕೇಳುತ್ತ ತಿಳಿವೆವು ।
ಕರನನೆಲ್ಲವನೆನುತ ಲಾಭೂ ।
ವರನು ಮನದನುರಾಗ ಮಿಗೆ ಬೆಸಗೊಂಡನಾತ್ಮಜೆಯು ॥

೬. ಎಲೆ ಮಗಳೆ, ನೀಂ ಪೋಗಿ ಬಂದುದ ।
ತಿಳುಹೆನಲು ನಿಜಪಿತನ ವಾಕ್ಯಂ ।
ಗಳನು ಸಾಕ್ಷಾದ್ದೇವತಾವಾಕ್ಯಂಗಳೆಂದೆಣಿಸಿ ॥
ಬಲುವಿನಯದಿಂ ಬಾಗಿ ಕನ್ಯಾ ।
ಕುಲಶಿರೋಮಣಿ ಬಿನ್ನವಿಸಿದಳು ।
ಬಳಿಯೊಳಿಹ ಮುನಿವರನು ಸಂತಸಗೊಳಲು ನಿಜಪಿತಗೆ ॥

೭. ಪಿತನೆ ಲಾಲಿಸು ಸಾಲ್ವದೇಶಕೆ ।
ಪತಿ ಮಹಾ ಸತ್ವಾತ್ಮ ಸದ್ಗುಣ ।
ಯುತನು ಧರ್ಮಜ್ಞ ದ್ಯುಮತ್ಸೇನಾಖ್ಯಪಾರ್ಥಿವನು ॥
ಗತನಯನನಾಗಲ್, ರಾಜ್ಯ ।
ಚ್ಯುತಿಯು ಹಗೆಯಿಂದಾಗೆ ಬಳಿಕಾ ।
ಕ್ಷಿತಿಪನಂಗನೆಗೂಡಿ ನಿಜಬಾಲಕನನೊಡಗೊಂಡು ॥

೮. ವರತಪೋವನಕೆಯ್ದಿ ತಪವನು ।
ವಿರಚಿಸುತ್ತಿಹನವನ ಸುತನನ ।
ವರತ ಋಷ್ಯಾಶ್ರಮದಲಭಿವೃದ್ಧಿಯನು ಹೊಂದುತ್ತ ॥

ಮೆರೆವನಾತನು ಹೆಸರಿನೊಳೆಂತ ।
ನ್ನಿರವಿಕೆಯೊಳಿಂ ಸತ್ಯವಂತನು ।
ವರಿಸಿರುವೆ ನಾನವನ ಮನದೊಳಗೆಂದಳೊಲವಿನಲಿ ॥

೯. ಅಂದು ಜನಪತಿ ಮುನಿಯು ನೋಡ ।
ಲ್ಕಿಂದನೆಲಿ ಜನಪಾಲ ನಿನ್ನಯ ।
ನಂದನೆಯು ಪೇಳ್ದಾದ್ಯುಮತ್ಸೇನಾಖ್ಯಪಾರ್ಥಿವನು ॥
ಎಂದುಮನುಪಮ ಸತ್ಯರತನದ ।
ರಿಂದಲಿಟ್ಟನು ನಂದನಂಗಾ ।
ನಂದದಿಂದಲಿ ಸತ್ಯವಂತನೆನುತ್ತ ನಾಮವನು ॥

೧೦ ಅರಸ, ಕೇಳಾಸತ್ಯವಂತನು ।
ಹರಿಸದಿಂ ತುರಗಗಳ ಮಣ್ಣೊಳು ।
ವಿರಚಿಸುತ ಚಿತ್ರಂಗಳೊಳಗುಂ ಬರೆಯುತಾಡುತಿರೆ ॥
ಪರಮಋಷಿಗಳು ನೋಡುತಾತನ ।
ಕರೆದರೈ ಚಿತ್ರಾಶ್ವನೆನ್ನುತ ।
ಲೆರಡು ನಾಮಗಳವನಿಗಾಯ್ತ್ರು ಜಗದೊಳದರಿಂದ ॥

೧೧. ಮುನಿವರನೆ, ವಿವರಿಸುವುದೆನಗಾ ।
ತನ ವಯೋರೂಪಂಗಳನು ಮೇ ।
ಣಿನಿಸು ಬಿಡದಾತನೊಳಗಿಹ ಗುಣದೋಷವೆಲ್ಲವನು ॥
ಘನಮಹಿಮ ಬೆಸಗೊಂಬೆನೆನ್ನಯ ।
ತನುಜೆಗಾತನು ತಕ್ಕವರನೇ ।
ಎನಲು ನೃಪತಿಗೆ ನಾರದ ಮಹಾ ಮುನಿಪನಿಂತೆಂದ ॥

೧೨. ಜನಪ, ಕೇಳಾಸತ್ಯವಂತನು ।
ಘನತರೋಜ್ಜ್ವಲರೂಪ ನವಯು ।
ವನವಿಲಾಸಮನೋಹರಾಂಗನು ಸಕಲಗುಣಯುತನು ॥
ಮುನಿನಿಕರಶಿಕ್ಷಿತನು ವಿದ್ಯಾ ।
ವಿನಯವಿತರಣಶಾಲಿ ಜನನೀ ।
ಜನಕಸೇವಾನಿರತನಮಲ ಚರಿತ್ರಯುತನೆಂದ ॥

೧೩. ಆತ ಸಾಂಕೃತಿ ರಂತಿದೇವ ಯ ।
ಯಾತಿಗಳಿಗೆಣೆಯೆನಿಪನತಿವಿ ।
ಖ್ಯಾತಶೌರ್ಯೌದಾರ್ಯಗಾಂಭೀರ್ಯಾದಿಗುಣಗಳಲಿ ॥
ಭೂತದಯೆಯುಳ್ಳವನು ಸುಮತಿ ವಿ ।
ನೀತ ತೇಜೋರಾಶಿ ಸಾಧು ।
ಪ್ರೀತನತುಲಿತಸತ್ಯಶೌಚಾಚಾರಯುತನೆಂದ ॥

೧೪. ಮೇದಿನೀಪತಿ ಕೇಳು ಸಕಲ ಗು ।
ಣೋದಧಿಯು ನಿಜವವನು ಲೋಕದೊ ।
ಳಾದರವನೊಳಗೊಂದು ಕೊರತೆಯುದಿರ್ಪುದೇನೆಂಬೆ ॥
ಈ ದಿವಸ ಮೊದಲೊಂದು ವರ್ಷ ।
ಕ್ಕೈದುವುದು ಮೃತಿಯವಗೆನಲ್ಕೆ ವಿ ।
ಷಾದವಾಂತಾನೃಪತಿ ತನ್ನಯ ಸುತೆಯೊಳಿಂತೆಂದ ॥

೧೫. ಎಲೆ ಮಗಳೆ, ನೀನೊಪ್ಪಿದಾತನು ।
ಕುಲವಯೋರೂಪಾದಿ ಸುಗುಣಂ ।
ಗಳಲಿ ನಿನಗನುರೂಪನಾದರು ಒಂದು ವರ್ಷಕ್ಕೆ ॥

ಅರಿವನೆನ್ನುತ ಪೇಳ್ವರಿವರೆಂ ।
ತಿಳಿಯೆನಂ ನಾಂ ಮಾಡಿಕೊಳ್ಳುವೆ ।
ಸುಳಿದವನನಿನ್ನೊರ್ವ ವರನನು ವರಿಸು ನೀನೆಂದ ॥

೧೬. ಸುಗುಣಿಯಾಗಲಿ ದೋಷಿಯಾಗಲಿ ।
ಬಗೆಯೆ ಪೂರ್ಣಾಯುಷ್ಯನಾಗಲಿ ।
ಮಗುಳಿವಂ ಕ್ಷೀಣಾಯುವಾಗಲಿ ಸತ್ಯವಂತನನು ॥
ಬಗೆಯೊಳಾಂ ವರಿಸಿರುವೆನಾತನೆ ।
ಜಗದೊಳಿನ್ನಯು ಪತಿಯು ಮಿಕ್ಕವ।
ರುಗಳು ನಿಮಗೆ ಸಮಾನರೆಂದಳು ನಯದಿ ಸಾವಿತ್ರಿ ॥

೧೭. ಮಾನನಿಧಿ ಪಿತ್ರಿತನೆ, ಕನ್ಯಾ ।
ದಾನವನು ಮೇಣ್ ಧನವಿಭಾಗವ ।
ಮಾನವರು ತಾವೊಮ್ಮೆ ಮಾಳ್ಪುದು ಧರ್ಮಪತ್ನಿಯನು ॥
ಏನುಸಿರ್ವೆ ನಿಮ್ಮಾಜ್ಞೆಯಿಂದಲೆ ।
ನಾನವನ ವರಿಸುವೆನು ಮನದೊಳ ।
ಗೀನೆಲದೊಳೆನಗವನೆ ಪತಿಯೆಂದುಸಿರ್ದಳಿಂದುಮುಖಿ ॥

೧೮. ಪೊಡವಿಪತಿ, ಕೇಳಿನ್ನ ಪುತ್ರಿಯು ।
ದೃಢಮತಿಯು ಮೇಣ್ ಧರ್ಮಚಾರಿಣಿ ।
ನುಡಿವುದೇನೆಮಗಿವಳ ಮನವನು ತಿರುಗಿಪುದು ಕಷ್ಟ ॥
ಕೊಡುವುದಿವಳನು ಸತ್ಯವಂತಗೆ ।
ಪಡಿಯೆನಿಪರಿನ್ನೊರ್ವರಿಲ್ಲೈ ।
ಮೃಡನ ಕೃಪೆಯಿದ್ದಂತೆಯಾಗಲೆನುತ್ತ ಮುನಿ ನುಡಿದ ॥

೧೯. ಮುನಿಪ ನಿಮ್ಮಾಜ್ಞೆಯೊಳಗಾತಗೆ ।
ತನುಭವೆಯ ಪರಿಣಯವ ಮಾಡುವೆ ।
ನೆನೆ ನೃಪನು ತವಸುತೆಯು ಮದುವೆ ನಿರಂತರಾಯದಲಿ॥
ಅನುಗೊಳಲಿ ಸುಖವಾಗಿರೆಂದಾ ।
ಜನಪನನು ಸಾವಿತ್ರಿಯನು ತ ।
ನ್ಮುನಿಪ ವರಸುತ ಸತ್ಯಲೋಕಕೆ ತೆರಳ್ದನೊಲವಿನಲಿ ॥

೨೦. ಬಳಿಕಲಾನೃಪ ಕರೆದು ಸಚಿವ ।
ರ್ಕಳನು ನಾವಿನ್ನೆಮ್ಮ ಕುವರಿಗೆ ।
ಬಳೆಸಬೇಕು ವಿವಾಹವನು ಬೇಕಾದ ವಸ್ತುಗಳ ॥
ಚಳಕದಿಂದನುಗೊಳಿಸಿ ನೀವೆಂ ।
ದೊಲವಿನಿಂದಲಿ ಪೇಳ್ದು ತನ್ನಯ ।
ಲಲನೆಗುಸಿರಲು ಪೊಕ್ಕನಂತಃಪುರವ ಕೇಳೆಂದ ॥

---

## ೩ನೆಯ ಆಶ್ವಾಸ.

---

ಸೂಚನೆ॥ ಮುದದಿ ವರಗುಣಿ ಸತ್ಯವಂತನ ।
ಮದುವೆಯಾಗಿ ಸುಭಕ್ತಿಯಿಂ ಪತಿ ।
ಪದವ ಸೇವಿಸುತಿರ್ದಳಾಸುಚರಿತ್ರೆ ಸಾವಿತ್ರಿ॥

೧. ಕೇಳು ಧರ್ಮಜ, ಬಳಿಕಲಾ ಭೂ ।
ಪಾಲ ಮದುವೆಗೆ ತಕ್ಕ ವಸ್ತುವ ।
ಮೇಳವಿಸಿಕೊಂಡಾದ್ಯಮತ್ಸ್ಯೇನಾಶ್ರಮಕೆ ತನ್ನ ॥

ಬಾಲೆಯನು ಕರೆಕೊಂಡು ಜೋಯಿಸ |
ಪೇಳಿದ ಮುಹೂರ್ತದೊಳು ಪರಿಜನ |
ಜಾಲ ಸಂಗಡ ಬರಲು ಸತಿಯೊಡಗೂಡಿ ಹೊರವಟ್ಟ ||

೨. ಬರುತಿರಲು ಮುಂಗಡೆಯೊಳೊಪ್ಪುವ |
ಸರಳಶಾಖಾಲಗ್ನವಲ್ಕಲ |
ಭರದಿ ಬಾಗಿದ ತರುಗಳಿಂ ಕೃತಹೋಮಧೂಮಗಳಿಂ ||
ತೊರೆದು ತಮತಮಗಿರುವ ವೈರವ |
ಚರಿಪ ಮೃಗಸಂಕುಲದಿ ನೋಡಲ್ |
ದುರಿತಹರವೆಂದೆನಿಸಿ ಮೇಧ್ಯಾರಣ್ಯವೊಪ್ಪಿದುದು ||

೩. ಆವನದೊಳಾಶ್ರಮದಿ ನಲವಿಂ |
ಪಾವನಕುಶಾಸನದಿ ಕುಳಿತಿಹ |
ಭೂವಿನುತನಾದಾದ್ಯಮತ್ಸ್ಯೇನಾಖ್ಯನನು ಕಂಡು ||
ದೇವ ಕೇಳಶ್ವಪತಿಯೆಂಬಾ |
ಭೂವರನು ನಾಂ ನಿಮ್ಮ ಪದರಾ |
ಜೀವಗಳಿಗಭಿವಂದಿಸುವೆನೆಂದೆರಗಿದನು ಪದಕೆ ||

೪. ಎನಲೊಡನೆ ವಿಧಿಪೂರ್ವವಾಗಿಯೆ |
ಜನಪತಿಗೆ ಮಧುಪರ್ಕವನು ಕೊ |
ಟ್ಟನುನಯಂ ಮಿಗೆ ಸತ್ಕರಿಸಿ ಬಳಿಕಾದ್ಯಮತ್ಸ್ಯೇನ ||
ಜನವೆ ಕುಶಲವೆ ನಿನಗೆ ನಿಮ್ಮಯ |
ಜನಪದವು ನಿಷ್ಕಂಟಕವೆ ಪಾ |
ವನಚರಿತ ನೀಂ ಬಂದ ಕಾರಣವೇನು ಪೇಳೆಂದ ||

೫. ಆಲಿಸೈ ರಾಜರ್ಷಿ, ಎನ್ನಯ ।
ಬಾಲೆಯೀ ಸಾವಿತ್ರಿಯಿವಳ ಸು ।
ಶೀಲನೆನಿಸಿದ ನಿಮ್ಮ ಪುತ್ರಗೆ ಮದುವೆಯನು ಮಾಡೆ ॥
ತಾಳಿ ಹರ್ಷವ ಬಂದೆನೆ ನೃಪ ।
ಮೌಳಿಮಣಿ, ಕಲ್ಪೋಕ್ತವಾಗೀ ।
ಬಾಲೆಗುಂ ತವ ಬಾಲಕಂಗುಂ ಮದುವೆಮಾಡೆಂದ ॥

೬. ಜನಪ ನಿನ್ನಭಿಮತವ ನೋಡಿದೊ ।
ಡೆನಗೆ ಪರಮಾಶ್ಚರ್ಯವಾದುದು ।
ಕನಕಗಿರಿಗಾಕಾಡುಮೆಟ್ಟಿಕದಾವ ಸಂಬಂಧ ।
ಅನುಪಮಿತ ಸಾಮ್ರಾಜ್ಯಶಾಲಿಗ ।
ಳೆನಿಸಿರುವ ನೀವೆಲ್ಲಿ ಘನಕಾ ।
ನನ ತಪಃಕ್ಲೇಶಾನ್ವಿತರು ನಾವೆಲ್ಲಿ ಹೇಳೆಂದ ॥

೭. ಈಗಳದರಿಂದೇನು ಸುಮುಹಾ ।
ಭಾಗ ಕೇಳ್ಕೆ ಶತ್ರುಜನರಿಂ ।
ಹೋಗಲಾಡಿಸಿಕೊಂಡು ರಾಜ್ಯವನೀ ಮಹಾಕಾನನಕೆ ॥
ಸಾಗಿ ಬಂದತಿಘೋರಕಷ್ಟವ ।
ನೀಗಹನದೊಳಗನುಭವಿಸುತಲಿ ।
ಯೋಗಿಧರ್ಮದಿ ತಪವನಾಚರಿಸುತ್ತಲಿಹೆವೆಂದ ॥

೮. ಇಂತು ತಪಿಸುವ ನಮ್ಮ ಸೇರ್ದಕೆ ।
ಚಿಂತು ಸಹಿಪಳು ಕಷ್ಟಗಳ ಭೂ ।
ಕಾಂತ ನಿನ್ನಯ ಪುತ್ರಿ ಕೋಮಲಗಾತ್ರಿ ಸಾವಿತ್ರಿ ॥

ಸಂತಸವಿನಾಂ ಪ್ರಾರ್ಥಿಸಲ್ಕಿವ ।
ನಂತರಾಯುವ ಪೇಳ್ವನೆನ್ನುತ ।
ನೀಂ ತಿಳಿಯುಬೇಡೆಂದು ಪೇಳಿದನಾದ್ಯುಮತ್ಸ್ಯೇನ ॥

೯. ವಿನುಸಿರ್ವ ನೀನಿಂತು ನುಡಿದರೆ ।
ಹಾನಿವೃದ್ಧಿಗಳೆಂಬುವಿವು ತಾ ।
ವೇನು ಶಾಶ್ವತಗಳೆ ವಿಚಾರಿಸಿ ನೋಡೆ ನೆಲೆಯುಲ್ಲ ॥
ದೀನನಾಗುವನೊರ್ವ್ವ ರಾಜ್ಯ ।
ಶ್ರೀನಿಲಯನಾದವನು ದೀನನು ।
ಮೀನೆಲಕೆ ಸಮ್ರಾಜನೆನಿಸುವನೊರ್ವ್ವ ಕೇಳೆಂದ ॥

೧೦. ಎಣಿಸೆ ಗುಣಸಂಪದಗಳೊಳು ತಾಂ ।
ಗುಣವೆ ಹಿರಿದೈ ಸಂಪದಂಗಳ ।
ಗಣಿಸುವರು ಮೂರ್ಖರು ದುರಾಶಾಪಾಶನಿಯುಮಿತರು ॥
ಗುಣಗಳುಳ್ಳ ಮನುಷ್ಯನೇ ಧಾ ।
ರಿಣಿಯೊಳಖಿಲಜನೈಕಮಾನ್ಯನು ।
ಗುಣರಹಿತಗೇನಿರ್ದ್ದೊಡೇಂ ತೃಣಸದೃಶನವನೆಂದ ॥

೧೧. ಕುಲವಯೋರೂಪಗಳ ನೋಡದೆ ।
ಕಲೆಯು ನೋಡದೆ ಗುಣವ ನೋಡದೆ ।
ನೆಲದೊಳಗೆ ಸಿರಿವಂತನೇ ಬಹುಯೋಗ್ಯವರನೆಂದು ॥
ಒಲಿದು ಗುಣವತಿ ಸುತೆಯನಿತ್ತಾ ।
ಬಳಿಕಳಲುವಾಸುತೆಯು ಶಾಪಂ ।
ಗಳಿಗೆ ಗುರಿಯಾಗುವ ದುರಾತ್ಮರ ಮಾತದೇಕೆಂದ ॥

೧೨. ಜ್ಞಾನನಿಧಿಯುದರಿಂದ ಸುಗುಣನಿ |
ಧಾನನೆನಿಸಿರುತಿರ್ಪ ನಿಮ್ಮಯ |
ಸೂನುವಿಗೆ ಗುಣವತಿಯೆನಿಪ್ಪೀಸುತೆಯನೊಲಿದಿತ್ತು ||
ನಾನು ಸಂತಸವಡುವೆನೆಂಬ ಮ |
ನೋನುರಾಗವ ಸಲಿಸಬೇಕೆಂ |
ದಾನರೇಂದ್ರನು ನುಡಿಯೆ ಪೇಳಿದನಾದ್ಯುಮತ್ಸೇನ ||

೧೩. ಎಲೆ ನೃಪೋತ್ತಮ, ನಿನ್ನೊಡನೆ ನಾ |
ಕೊಳುಕೊಡೆಗಳನು ಮಾಡಬೇಕೆಂ |
ದೆಳಸಿರುವೆನಾದರೆಯು ಮಾಡುವುದೇನು ರಾಜ್ಯವನು ||
ಕಳೆದುಕೊಂಡ ನಿಮಿತ್ತದಿಂ ನಿ |
ಮ್ಮೊಳಗೆಮಗೆ ಸಂಬಂಧ ತಾನೆಂ |
ತೆಳವಡುವುದೆಂದುಸಿರ್ದನಲ್ಲದೆ ಬೇರೆ ಯಿಲ್ಲೆಂದ ||

೧೪. ಅರಸ ಕೇಳ್ನಿ ನಿಸ್ಸ ಬಂಧುತೆ |
ದೊರೆದುದೆನ್ನಯ ಪುಣ್ಯವೇ ಸರಿ |
ವರಿಣಯವ ಬಳೆಸೀಗ ನೀನೆಂದೆನಲು ಸಂತಸದಿ ||
ಹರುಷದಿಂ ಬಳಿಕಶ್ವಪತಿ ತಾಂ |
ಕರೆಸಿದನು ಮುನಿವರರ ಕೂಡಲೆ |
ವಿರಚಿಸಿದರಾಮುನಿಗಳೊಲವಿಂ ಸ್ವಸ್ತಿವಾಚನೆಯಾ ||

೧೫. ಶುಭಮುಹೂರ್ತದೊಳಶ್ವಪತಿ ಮುನಿ |
ಸಭೆಯು ಜಯವೆನೆ ಸತ್ಯವಂತಂ |
ಗಭಿನವಾಲಂಕಾರಭೂಷಿತೆಯಾದ ನಿಜಸುತೆಯ ||

ವೇಳಲೀಂ ಕೊಡಲಿಯೊಳು ಕಾಷ್ಠವ ।
ಸೀಳುತಿರೆ ಜಿವುದರ್ಾಯುಸದಿ ತಲೆ ।
ಸೂಲೆ ಜನಿಸಲು ತಡೆಯಲಾರದೆ ಕಾಂತೆಗಿಂತೆಂದ ॥

೨. ಕೇಳು ಸತಿಯಾಯಾಸದಿಂ ತಲೆ ।
ಸೂಲೆ ಸಮನಿಸಿತಕ್ಕಟಾ ಕೈ ।
ಕಾಲು ಸೋತುವು ನಿಲ್ಲಲಾರೆನು ಹೃದಯದೊಳಗೆನಗೆ ॥
ಹೇಳಲರಿದಾಗಿರ್ಪ ಕಳವಳ ।
ಮೇಳವಿಸಿದುದು ಮಲಗಿಕೊಳುವೆನು ।
ತಾಳಲಾರೆನು ತಾಪವನು ತಾನೆಂದನಂಗನೆಗೆ ॥

೩. ಹಿಡಿದು ಕರದಿಂ ಪತಿಯ ಶಿರವನು ।
ತೊಡೆಯಮೇಲಿಟ್ಟಕಟ ಮುನಿಪತಿ ।
ನುಡಿದ ದಿನ ವೇಳಾಮುಹೂರ್ತಕ್ಷಣವಿದೇ ಎನುತ ॥
ಕಡುದುಗುಡವಾಂತಿರುವ ಸಮಯದೆ ।
ಮಡದಿಮಣಿ ತಾಂ ಕಂಡಳೈ ಪತಿ ।
ಯೆಡದ ಭಾಗದಿ ಬಂದು ನಿಂದ ಕರಾಳಕಾಲನನು ॥

೪. ಧರಿಸಿ ಪಾಶಾಯುಧವ ಕರದೊಳ ।
ಗರುಣವಸ್ತ್ರವ ಹೊದೆದು ಮಣಿಭಾ ।
ಸುರಕಿರೀಟವ ತಳೆದು ಶಿರದೊಳು ಜೇಸಗೆಯೊಳುರಿವ ॥
ತರಣಿಯಂದದಿ ಮೆರೆಯುತಲಿ ದುರ ।
ದುರನೆ ನೋಡುತ ಸತ್ಯವಂತನ ।
ಕೊರೆಯೊಳಿರ್ದಾ ಕಾಲನನು ಕಂಡಂಜಿ ಮನದೊಳಗೆ ॥

೫. ನಡನಡುಗಿ ನಿಜಪತಿಯು ಶಿರವನು |
ಮಡಗಿ ಪ್ರೊಡವಿಗೆ ಛಳಿಲನೆದ್ದವ |
ನಡಿಗೆ ನಮಿಸುತಲೆಲೆ ಮಹಾತ್ಮನೆ ಪೇಳು ನೀನಾರು ||
ಒಡಲ ನೋಡಲು ದಿವ್ಯತೇಜವ |
ಪಡೆದಿಹುದು ನೀನಾವದೇವತೆ |
ನುಡಿವುದೇತಕೆ ಬಂದೆಯೆಂದಳು ವಿನಯವಚನದಲಿ ||

೬. ಎಲೆ ಮಹಿತೆ ಸಾವಿತ್ರಿ, ಸಾಧ್ವೀ |
ಕುಲಮಣಿಯು ನೀನಾದ ಕಾರಣ |
ನೆಲದಿ ಕೇಳ್ನಿನ್ನೊಡನೆ ಮಾತಾಡುವೆನು ಮಿಕ್ಕರಿಗೆ ||
ಸೆಲೆಯ ತೋರುವವನಲ್ಲ ದೇವತೆ |
ಗಳೊಳು ಯಮನೆಂಬವನು ನಾನೀ |
ಇಳೆಗೆ ಬಂದಿಹ ತೆರನ ಪೇಳುವೆನಬಲೆ, ಕೇಳೆಂದ ||

೭. ನಿನ್ನ ಪತಿಯೀಸತ್ಯವಂತನು |
ಕನ್ನೆ ಕೇಳಲ್ಪಾಯುವೀತನ |
ನನ್ನಿಯಿಂ ಕೊಂಡುಯ್ಯೆ ಬಂದೆನಿದೆನ್ನ ಕಾರ್ಯವೆನೆ ||
ಸನ್ನುತಾಂಗಿಯು ಕೇಳಿದೊಡನು |
ಖಿನ್ನವಾದಳಲಿಂದ ಹೃದಯವು |
ಭಿನ್ನವಾಗಲು ತಳೆದು ಮೂರ್ಛೆಯ ಬಿದ್ದಳವನಿಯಲಿ ||

೮. ಬಳಿಕ ತನ್ನಿಂ ತಾನೆ ಮೂರ್ಛೆಯ |
ತಿಳಿದು ಬಲುಹಿಂ ಮನದಿ ಧೈರ್ಯವ |
ತಳೆದು ತರಣಿಜನೊಡನೆ ನುಡಿದಳು ವಿನಯವಚನದಲಿ ||

ಎಲೆ ಮಹಾತ್ಮನೆ ನಿನ್ನ ಪೂತರ ।
ಕೆಲಸವಿದು ನೀನೇತಕಾಗೀ ।
ಬಳಿಗೆ ಬಂದೆಯೆನಲ್ಕೆ ಕಾಲನು ಕಾಂತೆಗಿಂತೆಂದ ॥

೯. ಬಾಲಿಕಾಮಣಿ, ನಿನ್ನ ಪತಿ ಗುಣ ।
ಶಾಲಿ ಧರ್ಮಾತ್ಮನು ಸುರೂಪ ಸು ।
ಶೀಲನದರಿಂದಪನನುಯ್ಯಲು ನಾನೆ ನಡೆತಂದೆ ॥
ಕೇಳೆನುತಲಾಸತ್ಯವಂತನ ।
ಮೇಲೆ ಬೀಸುತ ಕರದ ಪಾಶವ ।
ಕಾಲನಾತನ ಜೀವಪುರುಷನ ಸೆಳೆದುಕೊಂಡೊಡನೆ ॥

೧೦. ಚಳಕದಿಂದಲಿ ದಕ್ಷಿಣಕೆ ತಾಂ ।
ತೆಳರಲಾಸಾವಿತ್ರಿಯಾಕ್ಷಣ ।
ವಳಿದಪತಿ ಯಂಗವನು ಮರುಗುತದೊಂದೆಡೆಯೊಳಿರಿಸಿ ॥
ಅಳುತಲಾಯುಮನೊಡನೆ ಗಮಿಸಿದ ।
ಛಲಧಿನಿಯಮವ್ರತೆ ಪತಿವ್ರತೆ ।
ಬಳಿಕ ಬೆಂಬಳಿವಿಡಿದು ಬರುಳನು ಕಂಡನಾಕಾಲ ॥

೧೧. ನಿಲ್ಲು ನೀಂ ಸಾವಿತ್ರಿ, ಸಾಕಿ ।
ನ್ನಿಲ್ಲಿವರೆಗುಂ ಬರುವೆ ನಿನ್ನಯ ।
ವಲ್ಲಭಗೆ ಪರಲೋಕಕರ್ಮವ ಮಾಡು ಹೋಗೆನಲು ॥
ಎಲ್ಲಿಗೆನ್ನಯ ಪತಿಯನುಯ್ವೆಯೊ ।
ಅಲ್ಲಿಗೈದುವೆ ನಾನು ಬೇರೇಂ ।
ಸೊಲ್ಲಿಸುವೆನಿದೆ ಧರ್ಮವೆನಗೆಂದಳು ಸರೋಜಮುಖಿ ॥

೧೨. ಹಿರಿಯರನು ನಾಂ ಸೇವಿಸಿದ್ದರೆ ।
ಪರತಪೋವ್ರತಗಳನು ನಿಯಮದಿ ।
ವಿರಚಿಸಿದ್ದರೆ ಪತಿಯೆ ಗತಿಯೆಂದೆನುತ ಮನದೊಳಗೆ ॥
ಇರಲು ಸುರಪತಿ ಕೇಳು ನಿನ್ನಯ ।
ಕರುಣದಿಂದಲಿ ಮತ್ಪತಿಯನನು ।
ಸಲಿಸುವೆನ್ನಯ ಗತಿಗೆ ತಡೆಯಿಲ್ಲೆಂದಳಾಸಾಧ್ವಿ ॥

೧೩. ಏಳು ಹೆಜ್ಜೆಗಳಿಂದ ಮೈತ್ರಿಯು ।
ಮೇಳವಿಸಿದುದು ನನಗೆ ನಿನ್ನೊಳು ॥
ಹೇಳುವರಲಾ ಬುಧರು "ಸಖ್ಯಂ ಸಾಪ್ತಪದ" ವೆಂದು ॥
ಬಾಲೆಯೆನ್ನುತುಪೇಕ್ಷಿಸದೆನೀ ।
ಪಾಲಿಸೆನ್ನೀಬಿನ್ನಪವ ನೆಂ ।
ಬಾಲಕಾಂಗಿಯು ನುಡಿದಳಂತಕನೊಡನೆ ವಿನಯದಲಿ ॥

೧೪. ಧರಣಿಯೊಳು ನಾಲ್ಕಾಶ್ರಮಂಗಳೊ ।
ಎರಡು ಮೂರನೆಯಾಶ್ರಮಂಗಳು ।
ಪರಗತಿಗೆ ನೆರೆ ಸುಕರಸಾಧನಗಳು ವಿಚಾರಿಸಲು ॥
ತರಣಿಜನೆ ಮತ್ಪತಿಯನುಯ್ದಾ ।
ಪುರುತರಾಶ್ರಮಧರ್ಮಲೋಪವ ।
ವಿರಚಿಸದಿರೆನಗೆಂದು ಬಿನ್ನೈಸಿದಳು ಸಾವಿತ್ರಿ ॥

೧೫. ತರುಣಿ ಕೇಳೌ ಸ್ತ್ರೀಯರಾಗಲಿ ।
ಪುರುಷರಾಗಲಿ ಧರ್ಮಸಾರವ ।
ಅರಿದವರೆ ಜಗದೊಳಗೆ ಪೂಜ್ಯರು ನೀನು ನುಡಿದುದಕೆ ॥

ರಿದು ಮೆಚ್ಚಿ ದೆನೀಗ ನಾಂ ನಿ ।
ರಸನನು ಹೊರತಾಗಿ ಮಿಕ್ಕಿನ ।
ರವ ಬೇಡೌ ಕೊಡುವೆನೆಂದನು ಕಾಲನೋಲವಿನಲಿ ॥

೧೬. ವರವನೀಯುವ ಮನವು ನಿನಗಿರೆ ।
ರವರನೆ ಕೇಳಂಧನಾಗುತ ।
ರಿಗಳಿಂ ಹೃತರಾಜ್ಯನಾಗಿ ವನಾಂತದೊಳು ತಪವ ॥
ರಿಸುತಿರುತಿಹ ನನ್ನ ಮಾವಗೆ ।
ರುಣಿಸೈ ಕಣ್ಗಳನು ಮತ್ತುರು ।
ರದ ಶಕ್ತಿಯುನೆಂದು ಬಿನ್ನೈಸಿದಳು ಸಾವಿತ್ರಿ ॥

೧೭. ತರಳೆ ಕೇಳ್ ಪ್ರಾರ್ಥಿಸಿದ ವರವನು ।
ರುಣಿಸಿದೆನೌ ನೀನು ಹಿಂದಕೆ ।
ರುಗು ಬಳಲಿಕೆಯೊಂತ ನಿನ್ನಯ ಪರಿಯ ನೋಡಲ್ಕೆ ॥
ರಿದು ಮರುಗುವುದೆನ್ನ ಮನವೆಂ ।
ರೆಯಲೊಡನಾಧರ್ಮರಾಜಗೆ ।
ರುಣಿಮಣಿ ತಾನಿಂತು ನುಡಿದಳು ವಿನಯವಚನದಲಿ ॥

೧೮. ಶ್ರಮವು ತಾನೆಲ್ಲಿಯದು ನನ್ನಯ ।
ರಮಣನೆಡೆಬಿಡದಿರುವ ನನಗು ।
ತ್ತಮವಲೇ ಪತಿಗತಿಯನನುಸರಿಸುವುದು ಸತಿಯರಿಗೆ ॥
ರಮಣನನು ನೀನೆಲ್ಲಿಗುಯ್ವೆಯೊ ।
ಗಮಿಸುವೆನು ನಾನಲ್ಲಿಗವನೊಡ ।
ರಮರವರ ಲಾಲಿಪುದು ಬಳಿಕಿನೆನ್ನಿಂದು ಬಿನ್ನಪವ ॥

೧೯. ಧರಣಿಯೊಳಗೆ ವಿಚಾರಿಸಲು ಸ |
ತ್ಪುರುಷದರ್ಶನಮಾತ್ರದಿಂದಲೆ |
ದೊರೆಯುವುವು ಜನರ್ಗಿಷ್ಟಸಿದ್ಧಿಗಳವರ ಸಂಗತಿಯು ||
ದೊರೆದ ಮನುಜರಭೀಷ್ಟಸಿದ್ಧಿಗೆ |
ಕೊರತೆಯುಂಟೇನದಕೆ ಸುಜನರ |
ನೆರವಿಯೊಳಗಿರಬೇಕು ಜೀವಗಳೆಂದಳೆಂದುಮುಖಿ ||

೨೦. ಮಾನಿನೀಮಣಿ, ನಿನ್ನ ನುಡಿ ಸುಮ |
ನೋನುಕೂಲವು ಬುದ್ಧಿ ವರ್ಧನ |
ಮಾನನೀಯವು ಹಿತಕರವು ಮೇಣ್ ಶ್ಲಾಘ್ಯವಿದು ನಿಜವು ||
ನೀನಿವನ ಜೀವಿತವನುಳಿದಿ |
ನ್ನೇನನಾದರು ವರವ ಬೇಡು ಮ |
ನೋನುರಾಗದೊಳೀವೆನೆಂದನೆ ನುಡಿದಳಾಸಾಧ್ವಿ ||

೨೧. ಅರಿಗಳಪಹರಿಸಿರ್ಪ ರಾಜ್ಯವ |
ಮರಳಿ ಪಡೆವಂತೆನ್ನ ಮಾವನು |
ಧರಣಿಯೊಳು ಮೇಣೆನ್ನ ಜನಕನು ತಾಂ ಸ್ವಧರ್ಮದಲಿ ||
ನಿರತನಾಗಿರುವಂತೆ ವರವನು |
ಕರುಣಿಪುದು ನೀನೆನಲು ಕೊಟ್ಟೆನು |
ತರಳೆ, ಹಿಂದಕೆ ತಿರುಗು ಬಳಲದಿರೆಂದನಂತಕನು ||

೨೨. ಈ ಮಹಿಯ ಮಾನವರಿಗೆಲ್ಲ ನಿ |
ಯಾಮಕನು ನೀನೆನಿಸಿ ಧರ್ಮಾದಿ |
ನೇಮಿಸುತ ಪರಲೋಕಗಳ ಕಲ್ಪಿಸುವೆಯದರಿಂದ ||

ಧಾಮನಿಧಿಜನೆ ನಿನ್ನೊಳಗೆ ಯಮ |
ನಾಮವಿದು ಸಾರ್ಥಕವಲೇ ಎನು |
ತಾಮಹಾಸತಿ ಮತ್ತೆ ಬಿನ್ನೈಸಿದಳು ತರಣಿಜಗೆ ||

೨೩. ಕಾಯವಾಙ್ಮನಸದಿ ಸುಜನರು |
ನ್ಯಾಯವನೆ ತಾವೆಸಗುತಿರ್ಪರು |
ಶ್ರೇಯವನುಬಯಸುವರುಪರರಿಗೆಬೇಡಿದುದನೊಲಿದು |
ಈಯುವವರು ಲೋಕದೊಳು ತಮ್ಮನು |
ನೋಯಿಸಿದ ವೈರಿಗಳನಾದರು |
ನೋಯಿಸದೆ ಕಾಯುವವರು ನೆರೆ ನಿರ್ವೈರಭಾವದಲಿ ||

೨೪. ನೀರನೆರೆದಂತಾದುದೌ ಬಾ |
ಯಾರಿದವಗೀನಿನ್ನ ನುಡಿ ಮನ |
ವಾರೆ ಸಂತಸವಾಂತೆನೀತನ ಹರಣ ಹೊರತಾಗಿ ||
ಸಾರಮತಿಯಿನ್ನೇನು ನಿನ್ನ ಮ |
ನೋರಥವು ಬೇಡೆನಲು ಕಾಲನು |
ಧೀರಮಾನಸೆ ಮತ್ತೆ ನುಡಿದಳು ವಿನಯವಚನದಲಿ ||

೨೫. ಸೂರಸುತ ಕೇಳೆನ್ನ ಪಿತಗೆ ಕು |
ಮಾರರಿಲ್ಲದರಿಂದಲಾತಗೆ |
ನೂರುಮಂದಿ ಕುಮಾರರುದಿಸುವ ವರವ ಕರುಣಿಸೆನೆ ||
ಸಾರಮತಿ ನಾಂ ಕೊಟ್ಟೆ ನಡೆ ಬಹು |
ದೂರ ಬಂದೌ ಎನಲು ಕಾಲನು |
ದಾರಮತಿ ಸತಿ ಬಳಿಕ ನುಡಿದಳು ಧರ್ಮರಾಜನೊಳು ||

೨೬ ಘನಮಹಿಮ, ಕೇಳ್ ಲೋಕಲೋಚನ ।
ನೆನಿಸಿ ಮೆರೆವ ವಿವಸ್ವತಗೆ ನೀಂ ।
ತನಯನೆನಿಪುದರಿಂದ ವೈವಸ್ವತನು ನೀನೆನಿಪೆ ॥
ಅನಿಶಮುಂ ಪ್ರಜೆಗಳನು ಧರ್ಮದೊ ।
ಳನಘಗುಣ ನೀಂ ನಡಸುವುದರಿಂ ।
ನಿನಗೆ ಸಲ್ವುದು ಧರ್ಮರಾಜನೆನಿಪ್ಪ ನಾಮವದು ॥

೨೭. ತರಣಿಜನೆ, ಕೇಳ್ ತಮ್ಮೊಳಗೆ ತಮ ।
ಗಿರುವ ಹಿತಚಿಂತನೆಗು ಮಿಗಿಲೆನಿ ।
ಸಿರುವ ಹಿತಚಿಂತನೆಯ ಮಾಳ್ಪರು ಪರರ್ಗೆ ಸಜ್ಜನರು ॥
ಧರೆಯೊಳದು ಕಾರಣದಿ ಮಿಗೆ ಸ ।
ತ್ಪುರುಷಸಂಗತಿವಡೆದ ಜನರಿಗೆ ।
ಕೊರತೆಯೆಂಬುದು ಬಾರದೈ ತಾನೆಂದಳಿಂದುಮುಖಿ ॥

೨೮. ತರುಣಿಮಣಿ, ನೀನೆಂದ ಮಾತಿಗೆ ।
ಸರಿಯೆನಿಪುದೊಂದುಂಟೆ ಜಗದೊಳು ।
ಹಿರಿದು ಸಂತಸವಾಂತೆ ಮನದೊಳು ನಿನ್ನ ವಲ್ಲಭನ ॥
ಶರಣವಿದು ಹೊರತಾಗಿ ಮಿಕ್ಕಿನ ।
ವರವ ಬೇಡೆನಲಂತಕನು ತ ।
ತ್ತರಣಿಜಂಗಭಿನಮಿಸಿ ಬಿನ್ನವಿಸಿದಳು ಸಾವಿತ್ರಿ ॥

೨೯. ಘನಮಹಿಮ, ಕೇಳ್ ಸತ್ಯವಂತನಿ ।
ನೆನಗೆ ನೂರ್ವರು ಪುತ್ರರುದರದಿ ।
ಜನಿಸುವಂದದಿ ವರವ ಕರುಣಾನಿಧಿಯೆ ಕರುಣಿಸೆನೆ ॥

ಕೆನವತಿವ್ರತೆನಿನ್ನ ಬಸಿರೊಳು ।
ತನಯರನಿಬರು ಜನಿಸುವರು ಪ್ರೋ ।
ಗೆನಲು ಬಲುವಮುದವಾಂತು ನುಡಿದಳು ಬಳಿಕ ಸಾವಿತ್ರಿ ॥

೩೦. ಕ್ಷಿತಿ ರಸಾತಲಕಿಳಿದರೆಯು ಪ ।
ರ್ವತಗಳೆಲ್ಲಾ ಡಿದರು ಸೂರ್ಯನ ।
ಗತಿಯು ನಿಂತರು ಜಗದಿ ಸುಜನರ ಧರ್ಮವರ್ತನೆಗೆ ॥
ಚ್ಯುತಿಯು ಬಾರದು ಸಜ್ಜನರ ಸಂ ।
ಗತಿಯುದೆಂದಿಗು ವಿಫಲವಾಗದು ।
ಹಿತವ ಮಾಡುವುದಿಹವರಂಗಳೊಳೆಂದಳಾಸಾಧ್ವಿ ॥

೩೧. ಮರೆಯ ಹೊಕ್ಕರಿಗಭಯವೀಯುತ ।
ಪೊರೆಯುವರು ಬಲುಕರುಣದಿಂದಲಿ ।
ಮರಗುವಕರಿಸುವುದೆ ಶಾಶ್ವತ ಧರ್ಮವೆಂದೆನುತ ॥
ಅರಿದು ನಡೆವರು ಮನದಿ ಗರ್ವಿಸ ।
ದಿರುವರೈ ಸತ್ಪುರುಷರದರಿಂ ।
ಧರೆಯೊಳವರನು ನೇರ್ದ ಜನರಿಗೆ ದುಃಖವೆಲ್ಲಿಹುದು ॥

೩೨. ಅವರ ಸತ್ಯದಿ ಚರಿಸುವನು ರವಿ ।
ಯವರ ಸತ್ಯದಿ ಭೂಮಿ ನಿಂತಿಹು ।
ದವರ ತಪದಿಂ ಕಾಲಕಾಲದಿ ಮಳೆ ಬೆಳೆಗಳಹುವು ॥
ಅವರೆ ಲೋಕೋದ್ಧಾರಕರು ನಿಜ ।
ವವರನುಗ್ರಹ ವಿಫಲವಾಗದು ।
ದಿವಿಜವರ, ನೀಂ ಪಾಲಿಸೆಂದುಸಿರಿದಳು ಸಾವಿತ್ರಿ ॥

೩೩. ಆನುಡಿಗೆ ತಲೆದೂಗಿ ಜವನೆಲೆ ।
ಮಾನಿನೀಮಣಿ, ಮೆಚ್ಚಿದೆನು ನೀ ।
ನೇನನಾದರು ಬೇಡು ಕೊಡುವೆನು ವರವನೆಂದೆನಲು ॥
ಮಾನವತಿ ಮನದೊಳಗೆ ಬಲುಸು ।
ಮ್ಮಾನವಾಂತು ನಿಜಾಶಯವನಾ ।
ಭಾನುಜಂಗಭಿನಮಿಸಿ ಬಿನ್ನವಿಸಿದಳು ವಿನಯದಲಿ ॥

೩೪. ಸುರವರನೆ, ಕೇಳೆನ್ನ ಮನದೊಳ ।
ಗಿರುವಭಿಪ್ರಾಯವನು ಪೇಳ್ವೆನು ।
ಧರೆಯೊಳಗೆ ಪತಿಹೀನೆಯಿದ್ದರು ಮೃತೆಯು ತಾನಲ್ತೆ ॥
ಕರುಣಿಸದರಿಂ ಪತಿಯು ಜೀವಿಪ ।
ವರವ ಬೇರಿನ್ನಾವುದನು ನಾ ।
ನೆರೆಯೆನೆಂದಂತಕಗೆ ಮತ್ತಿಂತೆಂದಳಿಂದುಮುಖಿ ॥

೩೫. ಪತಿ ಹೊರತು ಬೇರೊಂದು ಸುಖವನು ।
ಪತಿಹೊರತು ಬೇರೊಂದು ಗತಿಯನು ।
ಪತಿಹೊರತು ಬೇರೊಂದು ಪದವಿಯ ಬಯಸೆನೈಯೆನಗೆ ॥
ಶತತನಯರಹ ವರವನಿತ್ತಿಹೆ ।
ಪತಿರಹಿತೆಗೆನಗೆಂತು ಘಟಿಪುದು ।
ಪತಿಯ ಕರುಣಿಸೆ ನಿನ್ನ ವಚನವೆ ಸತ್ಯವಹುದೆನಲು ॥

೩೬. ಹರುಷದಿಂದಂತಾಗಲೆನ್ನುತ ।
ಕರದ ಪಾಶವ ಕಳೆದು ಜವನೆಲೆ ।
ತರುಣಿ, ನಿನ್ನಯ ಪತಿಯ ಬಿಟ್ಟೆನು ಭೋಗಸುಖವಿಂದ ॥

ಆರುಜನರಾಗೀಸತ್ಯವಂತನು ।
ಧರಣಿಯೊಳು ನಾನೂರು ವರುಷದ ।
ವರೆಗು ಜೀವಿಸಿ ಪಡೆದು ನಿನ್ನೊಳು ಶತಸುತರ್ಕಳನು ॥

೩೭. ವಿರಚಿಸುತ ಬಹುಯಜ್ಞದಾನವ ।
ಧರಣಿಯನು ಸದ್ಧರ್ಮದಿಂದಲಿ ।
ಪೊರೆದುಕೀರ್ತಿಯುಪಡೆದುಮೆರೆವನು ತತ್ತನೂಭವರು ॥
ಉರುಪರಾಕ್ರಮರಾಗಿ ಬಾಳ್ವರು ।
ತರಳೆ ನೀನೆನುತಿತ್ತು ವರವನು ।
ಹರುಷ ಮಿಗೆ ತೆರಳಿದನು ನಿಜಪುರಕರಸ ಕೇಳೆಂದ ॥

---

## ೭ ನೆ ಯ ಆ ಶ್ವಾ ಸ.

ಸೂಚನೆ । ಪಡೆದು ಜೀವವ ಸತ್ಯವಂತನು ।
ಮುದದಿಮಡದಿಯೊಡಗೂಡಿ ಜವದಿಂ ।
ನಡೆದನಿರುಳೊಳೆ ವೃದ್ಧಜನನೀಜನಕರಾಶ್ರಮಕೆ ॥

೧. ಎಲೆ ನೃಪತಿ, ಕೇಳ್ಸತಿಯ ಡಿಂಬದ ।
ಬಳಿಗೆ ಬಂದಂಕದೊಳಗಾತನ ।
ತಲೆಯನಿಟ್ಟವಲೋಕಿಸಲ್ಸಾವಿತ್ರಿಯಾಕ್ಷಣದಿ ॥
ಮಲಗಿದವರೇಳ್ವಂತೆ ಸಂಜ್ಞೆಯು ।
ತಳೆಯುತೆದ್ದಾಸತ್ಯವಂತನು ।
ಲಲನೆಯೊಡನಿಂತೆಂದನಚ್ಚರಿವಡೆದು ಮನದೊಳಗೆ॥

೨. ಮಲಗಿದೆನು ಬಲುಹೊತ್ತು ನಾನೆಲೆ ।
ಲಲನೆ, ನಿನ್ನಂಕದೊಳಗೆಬ್ಬಿಸ ।
ದುಳಿದ ಕಾರಣವೇನದಂತಿರಲಾವನೋ ಎನ್ನ ॥
ಬಲುಹಿನಿಂದಲಿ ಕಟ್ಟಿ ಪಾಶದಿ ।
ಸೆಳೆವನಲ್ಲಾ ಜಲಧರಶ್ಯಾ ।
ಮಳಶರೀರನದಾರು ಪೇಳೆಂದೆನುತ ಬೆಸಗೊಂಡ ॥

೩. ಇದು ಕನಸೊ ಮೇಣ್ನಿಜವೊ ಕಾಣೆನು ।
ಹೃದಯವಲ್ಲಭೆ ಪೇಳೆನಲ್ಕಾ ।
ಸುದತಿ ನುಡಿವಳು ವಲ್ಲಭನೆ ಲಾಲಿಪುದು ನಿಮಗದರ ॥
ಹದನವೆಲ್ಲವ ನಾಳೆ ಪೇಳ್ವೆನು ।
ಮುದುಕರಾಗಿಹ ನಿಮ್ಮ ಪಿತೃಗಳು ।
ಕುದಿವರೆಂತೋ ಮನವಿ ನಾವಾಶ್ರಮಕೆ ಪೋಗದಿರೆ ॥

೪. ಇರುಳು ಬಲಿದುದು ನೋಡೆ ರಾತ್ರಿಂ ।
ಚರರು ತಿರುಗುವ ಹೊತ್ತಿದತಿಭೀ ।
ಕರಮೃಗಾಶ್ರಯವಿಪಿನವಿದು ಗಾಢಾಂಧಕಾರದಲಿ ॥
ಅರಿಯಲಾಗದು ದಿಕ್ಕುಗಳನಿ ।
ಲ್ಲಿರುವ ಮನ ನಿಮಗುಂಟೆ ಪೇಳೆನ ।
ಲರಸಿಯೊಡನಾಸತ್ಯವಂತನು ನುಡಿದನೊಲವಿನಲಿ ॥

೫. ಮೊದಲೆ ವಿಪಿನವಿದು ಭಯಂಕರ ।
ವಿದರ ಮೇಲತಿಗಾಢತಮದಿಂ ।
ಪುದಿದಿಹುದು ಪೋಗುವರೆ ಮಾರ್ಗವೆ ತೋರವಿಹುದದರಿಂ ॥

ಹೃದಯಮಿದು ಕಂಪಿಸುವುದೆನಗುಂ ।
ಸುದತಿಯೇ ಪಲ್ಲವದೊಲಿರುವೀ ।
ಮೃದುಪದವನೆಂತಂಜದಿಡುವೆಯೊ ಪೇಳು ನೀನೆಂದ ॥

೬. ಅರಸ ಕೇಳಂತಾದೊಡಿದೊ ಮುಂ ।
ದುರಿಯುತಿರ್ಪೀ ಕಾಡಮರದಿಂ ।
ಭರದೊಳಗ್ನಿಯು ತಂದು ಹೊತ್ತಿಸಿ ತಮವಕಳೆಯುವೆನು ॥
ಶಿರದ ವೇದನೆಯಿಂದ ಚರಿಸುವ ।
ಪರಿಯದೆಂತಿನನುದಿಸೆ ಬಳಿಕಲಿ ।
ತೆರಳುವೆವು ನಾವೆಂದು ನುಡಿದಳು ಸತಿಯು ನಿಜಪತಿಗೆ ॥

೭. ಎಲೆ ಮಡದಿ, ತಲೆನೋವು ಕಳೆದುದು ।
ಬಳಲಿಕೆಯು ನನಗಿಲ್ಲ ನೀನೆ ।
ನ್ನೊಳಗೆದಯವಿಡೆ ಮಾತೃಪಿತೃಗಳನೋಡಿಸುಖಿಸುವೆನು ॥
ಜಲಜಮುಖಿ ಕೇಳಾಶ್ರಮವನಾ ।
ನುಳಿದು ನಿಂತವನಲ್ಲವೆಲ್ಲಿಯು ।
ಕಳವಳಿಸುವರು ತಾಯಿತಂದೆಗಳೆನ್ನ ಕಾಣದಿರೆ ॥

೮. ಹಗಲೊಳಗು ನಾಂ ತಳುವಿದರೆಯು ।
ನ್ನಗಲಿಕೆಯ ಪಿತನಿನಿಸು ಸಹಿಸದೆ ।
ಬಗೆಯೊಳಳುಕುತ ಮುನಿಗಳೊಡನರಸುತ್ತ ಬಂದೆನ್ನ ॥
ಮೊಗವ ಕಂಡೊಡನಳಲು ಮಿಗೆ ಹಾ ।
ಮಗನೆ ಬಲುಹೊತ್ತೇಕೆ ನಿಂತೀ ।
ಜಗರಣವ ನೀಂ ಗೈದೆಯೆನ್ನುತ ಮರುಗುತಿಹನದರಿಂ ॥

೯. ಬೇಗ ನಾನಾಶ್ರಮಕೆ ಸತಿ ಕೇಳ್ ।
ಪೋಗದಿರಲೆನ್ನ ಗಲಿಕೆಯ ಬಲು ।
ಬೇಗೆಯಿಂದೇನಾಗುವರೊ ಮಾತೃಪಿತೃಗಳದನರಿಯೆ ॥
ಈಗಲೆನ್ನಯ ಬಗೆಯೊಳಂ ಬಲು ।
ಬೇಗುದಿಯು ಜನಿಸಿಹುದಕಟ ಮುಂ ।
ದೇಗತಿಯೊ ನಾನವರ ತೊರೆದಿರಲಾರೆ ವಿಪಿನದೊಳು ॥

೧೦. ನಂದನರು ಮಿಗೆ ತಮ್ಮ ಸಲಹುವ ।
ರೆಂದು ಪಡೆಯುವರಲ್ತೆ ಲೋಕದಿ ।
ತಂದೆತಾಯ್ಗಳು ನಾವವರ ಚಿತ್ತಕ್ಕೆ ದಂದುಗವ ॥
ತಂದ ಮೇಲಿನ್ನುದಿಸಿ ಫಲವೇ ।
ನಿಂದುಮುಖಿಯೆಂತಳಲುವರೊ ನಾ ।
ನೊಂದು ನಿಮಿಷವು ತೊರೆದವರ ಜೀವಿಸುವನಲ್ಲ ನುತ ॥

೧೧. ಮನದಳಲು ಪಿರಿದಾಗೆ ಘನರೋ ।
ದನವ ಮಾಡಿದನಕಟ ಜನನೀ ।
ಜನಕಭಕ್ತನು ಸತ್ಯವಂತನು ಧರ್ಮಜನೆ ಕೇಳ್ಳ ॥
ಇನಿಯನಾಸ್ಯದೊಳುಗುವ ಕಣ್ಣೀ ।
ರ್ವನಿಗಳನು ತಾಂ ತೊಡೆದು ಸೆರಗಿಂ ।
ಸವಿಯ ಮಿಗೆ ಸಂತೈಸುತೆಂದಳು ಬಳಿಕ ಸಾವಿತ್ರಿ ॥

೧೨. ಪತಿಯೆ ಪರದೇವತೆಯೆನುತ್ತಲಿ ।
ಮತಿಯೊಳಗೆ ನಾಂ ಭಾವಿಸಿರ್ದರೆ ।
ಸುತ ತಪೋವ್ರತಗಳನು ರಚಿಸಿರ್ದರೆ ಸುಭಕ್ತಿಯೊಳು ॥

ಕ್ಷಿತಿಯೊಳಗೆ ನಮ್ಮಕೃತ್ತ್ಯವಾವರಿ ।
ಗತಿಹಿತವು ತಾನಾಗಲಿರುಳಿ ।
ನ್ನುತ ಸುಭಕ್ತಿಯೊಳಿಷ್ಟದೇವತೆಯುನ್ನು ಭಜಿಸಿದಳು ॥

೧೩. ಇನಿಯ ಶೋಕಿಪುದೇಕೆ ನಿನ್ನಯ ।
ಜನಕನುಂ ಮೇಣ್ ಜನನಿಯುಂ ತಾ ।
ರನೃತವಾಡಿದರಲ್ಲವೆಂದುಂ ಸತ್ಯವಂತರಿಗೆ ॥
ಜನಿಸಲರಿಯದು ಕಷ್ಟನಿಜವವ ।
ರನಘ ಸತ್ಯವೆ ಕಾವುದವರನು ।
ಮನದ ದುಗುಡವನುಳಿಯೆನುತ ಸಂತೈಸಿದಳು ಪತಿಯ ॥

೧೪. ಮನವು ಕಳವಳಿಸುವುದು ಜನನೀ ।
ಜನಕರನು ನೆನೆನೆನೆದು ಕೇಳಲಿ ।
ವನಿತೆಯವರೊಳಗಾರಿಗಾದರು ಕೇಡು ಸಂಭವಿಸೆ ॥
ತನುವ ಧರಿಸುವನಲ್ಲ ನಾಂ ನೀ ।
ಎನಗೆ ಹಿತವನು ಮಾಳ್ಪಳಾದರೆ ।
ವನದಿ ನಿಲ್ಲುವುದನುಚಿತವು ನಡೆಯೆಂದನಾಶ್ರಮಕೆ ॥

೧೫. ಮಡದಿಮಣಿ ಕೇಳ್ದೊಡನೆ ತನ್ನಯ ।
ಮುಡಿಯ ಸವನಿಸಿ ಕಟ್ಟಿ ಕರದಿಂ ।
ಪಿಡಿದು ನಿಜವಲ್ಲಭನ ತೋಳ್ಗಳನೆತ್ತಿ ಬಳಿಕಿನಲಿ ॥
ಮಡಗಿದಾಫಲಪೂರ್ಣಪುಟಕೆಯ ।
ಕೊಡುವುದೆನಲಿದನಾಳೆ ಕೊಂಬೆವು ।
ನಡೆಯಿರೆನ್ನುತ ಗಿಡಕೆ ತಗುಲಿಸಿ ನಡೆದಳಿನನೊಡನೆ ॥

೧೬. ಜನಪನಂದನೆ ಮೊದಲಿ ಮೋಣ್ ಮೃದು |
ತನುವಿದಲ್ಲದೆ ನಾಲ್ಕುದಿನದಿಂ |
ದನಶನವ್ರತೆಯಾದರೆಯು ಪತಿಸೇವೆಗಲಸಿದಳೆ ||
ಮನದೊಳಾದರು ಬೇಸರಿಸಿದಳೆ |
ಘನಪತಿವ್ರತೆ ನಿಜಕರಾಲಂ |
ಬನದಿ ಪತಿಯನು ನಡಿಸಿಕೊಂಡೈದಿದಳು ವಿಪಿನದಲಿ ||

೧೭. ಲಲನೆಗೆಂದನು ಸತ್ಯವಂತನು |
ಜಲಜಮುಖಿ ಮರದೆಲೆಗಳಂತರ |
ದೊಳಗೆ ಬಿದ್ದಿಹ ಚಂದ್ರಕಿರಣದಿ ಬಂದ ಮಾರ್ಗವನು ||
ತಿಳಿಯುವೆನು ನೀಂ ನೆಲನ ನೋಡುತ |
ತಳವುರ್ದತಿಮೃದುವೆನಿಪ ನಿನ್ನಡಿ |
ಗಳಿಗೆ ಕಲ್ಮುಳ್ಳುಗಳ ಹತಿ ಸಂಭವಿಸದಂದದಲಿ ||

೧೮. ಜನಪ ಕೇಳತಿವೃದ್ಧಜನನೀ |
ಜನಕರನು ತಾಂ ನೋಳ್ಪ ತವಕದಿ |
ಘನಕಠೋರವನಾಂತದೊಳು ನಟ್ಟಿರುಳೊಳುಂ ಜವದಿ ||
ವನಿತೆಯೊಡಗೂಡಿಂತು ನಡೆದನು |
ಮನದ ಭಕ್ತಿಯದೆಂತೊ ಪಿತೃಗಳೊ |
ಳನಘ ಗುಣನಿಧಿ ಸತ್ಯವಂತನು ಜಗದೊಳಿವನಲ್ತೆ ||

ಸೂಚನೆ ॥ ಅನುಪಮೈಶ್ವರ್ಯವನು ಪತಿಯೊಡ ।
ನನುಭವಿಸುತಾನಂದ ವಿಾಗೆ ನ೧।
ದನರ ನೂರ್ವರ ಪಡೆದು ಬಾಳ್ದಳು ಸುಗುಣೆ ಸಾವಿತ್ರಿ ॥

೧. ಜನಪ, ಕೇಳೈ ಸತ್ಯವಂತನ ।
ಜನಕನಚ್ಚರಿವಡುತ ಕಣ್ಗಳು ।
ತನಗೆ ಬಂದುದನರಿದು ಬಳಿಕಲಿ ಕಾಂತೆಯೊಡಗೂಡಿ ॥
ತನುಭವನು ತಾಂ ಫಲವ ತರೆ ಕಾ ।
ನನಕೆ ಪೋದವನಕ್ಕಟಾ! ಬರ ।
ಲಿನಿತುಪ್ರೊತ್ತೇಕೆನುತ ಮನದೊಳು ಪಿರಿದು ಚಿಂತಿಸಿದ ॥

೨. ಸರಸಿಯುಲಿ ಮೋಹ ಪುಣ್ಯನದಿಗಳ ।
ಪರಿಸರ ಮುಷ್ಯಾಶ್ರಮಂಗಳ ।
ನೆರವಿಯುಲಿ ವನಗಿರಿನಿತಂಬದಿ ಪುಷ್ಪವಾಟಿಯುಲ ॥
ಅರಸರಸಿ ಹಂಬಲಿಸಿ ತನಯುನ ।
ಬರವ ಕಾಣದೆ ಮರುಗಿ ಮನದೊಳು ।
ಚರಿಸುತಿರ್ದರು ದಂಪತಿಗಳಾವಿಪಿನ ಮಧ್ಯದಲಿ ॥

೩. ತಪಗೆಲೆಯು ಗಿರುಕೆನಲು ಥಕ್ಕನೆ ।
ತಿರುಗಿ ನೋಳ್ಪದಲ್ಲಿರುವೆ ಬಾ ।
ತರಳ ಮೋದದೋರೆಂಬು ಮುಳೆರದಿಂದ ಹಲುಬುತಲಿ ॥
ಮರುಗುವರು ಕಳವಳಿಸುವರು ಕಾ ।
ತರಿಸುವರು ತೊಳಲುವರು ತನುಭವ ।
ನಿರುವ ನೆಲೆಯುನು ಕಾಣದಾದಂಪತಿಗಳಡಿಗಡಿಗೆ ॥

೪. ಎಲೆ ತಿಲಕ ಸುಕುಮಾರತಿಲಕನು ।
ತೊಳೆರ್ದನೆಲ್ಲಿಗೆ ಪೇಳಶೋಕವೆ ।
ನೆಲದೊಳೆಮ್ಮನಶೋಕರಂ ಗೈದಣುಗ ತಾನೆಲ್ಲಿ ॥
ಎಲೆ ರಸಾಲವೆ ನಮ್ಮಭೀಷ್ಟವ ।
ಸಲಿಸುತಿಹ ಸುರಸಾಲನಿರುತಿಹ ।
ನೆಲೆಯ ಪೇಳಿರೆನುತ್ತ ಹಂಬಲಿಸಿದರು ಪಲತೆರದಿ ॥

೫. ಪರುಷತರಪಾಷಾಣತತಿಯಿಂ ।
ಬಿರಿದ ತಮ್ಮಯ ಚರಣದಿಂ ಮಿಗೆ ।
ಸುರಿವ ರಕುತವ ಲೆಕ್ಕಿಸದೆ ಕುಶಕಂಟಕಗಳಿಂದ ॥
ತುರುಗಿದಂಗದ ನೋವನರಿಯದೆ ।
ಮರುಳರಂದದಿ ತಿರುಗಿದರು ಸುತ ।
ನಿರುವ ನೆಲೆಯನು ಕಾಣದರಸುತ ವಿಪಿನಮಧ್ಯದಲಿ ॥

೬. ನೆರೆಯೊಳಿರ್ಪಾಶ್ರಮಿಗಳಂದವ ।
ರಿರವ ನೋಡಿ ತದಾಶ್ರಮಕೆ ಬಲು ।
ಮರುಕದಿಂದೊಡನೆಯ್ದಿ ಮುನ್ನಿನ ನೃಪರ ಚರಿತೆಗಳ ॥
ಒರೆದು ಸಂತೈಸುತ್ತಲಿರೆ ಮೋಹ ।
ಸ್ಮರಿಸಿ ಪುತ್ರನ ಬಾಲ್ಯಚರಿತವ ।
ಮರುಗುತಿರ್ದರು ಮನದಿ ತದ್ದಂಪತಿಗಳಡಿಗಡಿಗೆ ॥

೭. ಧಾತ್ರಿಯರಸನೆ ನಿನ್ನ ಸೊಸೆ ಸುಚ ।
ರಿತ್ರ ಸೌಮಂಗಲ್ಯವಿಲಸಿತ ।
ಗಾತ್ರಿಯವರಿಂದವಳ ಸೌಶೀಲ್ಯಪ್ರಭಾವದೊಳು ॥

ನೇತ್ರಗಳು ನಿನಗುದಿಸಿದುವು ತವ ।
ಪುತ್ರನುಂ ದೀರ್ಘಾಯುವೈ ಸುಚ ।
ರಿತ್ರ ಹಲುಬುವುದೇತಕೆಂದರು ಸಕಲಮುನಿವರರು ॥

೮. ಕೂಗುತಿವೆ ಶುಭವಾಗಿ ಪಕ್ಷಿಗ ।
ಳಾಗುತಿದೆ ಸುನಿಮಿತ್ತವದರಿಂ ।
ರಾಗದಿಂದಲಿ ಸತ್ಯವಂತನು ಸತಿಯನೊಡಗೊಂಡು ॥
ಈಗಳೀ ಬಂದಪನೆನುತಾ ।
ಯೋಗಿವರರುಸಿರುತ್ತಿರಲ್ಕೊಡ ।
ನಾಗ ತವಕದಿ ಸತ್ಯವಂತನು ಬಂದನವರೆಡೆಗೆ ॥

೯. ಕಂದ ಬಂದೈ ಪ್ರೇಮಸದು ।
ಕ್ಕಂದ ಬಂದೈ ಹೃದಯಪಿಕವಾ ।
ಕಂದ ಬಂದೈ ಸತಿವೆರಸಿ ನೀನೆಂದು ಸಂತಸದಿ ॥
ನಂದನನನಿರ್ಕೈಗಳಿಂದಾ ।
ನಂದ ಮಿಗೆ ತಕ್ಕೈಸಿ ತೃಪ್ತಿಯ ।
ಹೊಂದಿದರು ಚಿತ್ತದೊಳಗಾತನ ತಾಯಿತಂದೆಗಳು ॥

೧೦. ಬಳಿಕಲಾಮುನಿವರರು ತನ್ನೃಪ ॥
ತಿಲಕನನು ಬೆಸಗೊಂಡರೊಲವಿಂ ।
ದಿಳೆಯರಸ ನಾವೆಂದ ವಚನವು ತಪ್ಪದಾಯಿತಲೆ ॥
ಕುಲವಿಭೂಷಣ ಪುತ್ರನನುಪಮಂ ।
ಗಳಚರಿತ್ರಯು ನೊಸೆಯನುಂ ಕಂ ।
ಗಳನು ಪಡೆದಭಿವೃದ್ಧಿಯಾಂತ್ಯೈ ದೈವಕರುಣೆಯೊಳು ॥

೧೧. ಪ್ರೌಢವಿಯೆಡೆಯನೆ, ನಿನ್ನ ರಾಜ್ಯವು ।
ಪ್ರೌಢನೆ ದೊರೆವುದು ಪ್ರೌಢಿಸೆಂಗನೆ ।
ಯೊಢನೆ ಯಜ್ಞೇಶ್ವರನನೆಂದಾಧರಣಿಪತಿಯಿಂದ ॥
ನಡಿಸಿ ಯಜ್ಞೇಶ್ವರಸಮರ್ಚೆಯ ।
ಸಡಗರದಿ ಪಿತೃಸೆಡೆಯೊಳಂಗನೆ ।
ಯೊಡನೆ ಕುಳಿತಿಹ ಸತ್ಯವಂತನೊಳೆಂದರೊಲವಿನಲಿ ॥

೧೨. ಎಲೆ ಗುಣಾಕರ ಸತ್ಯವಂತನೆ ।
ಚಲಿಸಿ ನೀಂ ವನಕಿನಿತು ಕಾಲವು ।
ತಳುವಲೇನು ನಿಮಿತ್ತವೀನಟ್ಟಿರುಳೊಳೈತರಲು ॥
ಬಲಿದ ಕಾರ್ಯವದಾವುದೇತಕೆ ।
ತೊಳಲಿಸಿದೆ ನೀಂ ತಂದೆತಾಯ್ಗಳ ।
ನಲಘುಚರಿತನೆ ಪೇಳೆನುತ ಬೆಸಗೊಂಡೊಡಿಂತೆಂದ ॥

೧೩. ಜನಕನಾಜ್ಞೆಯನಾಂತು ಹೋದೆನು ।
ಬನಕೆ ವನಿತೆಯು ಕೂಡಿ ಬಳಿಕಾ ।
ವನದ ಕಾಷ್ಠವ ಕಡಿಯುತಿರೆ ಸಂತಾಪವಾಯ್ತೆನಗೆ ॥
ಇನಿಯಳಂಕದಿ ಮಲಗೆ ಬಂದುದು ।
ಘನಸುಷುಪ್ತಿ ಬಳಿಕ್ಕ ಪಿತೃಗಳ ।
ನೆನೆದು ತಪಿಸುವರೆಂದು ಬಂದೆನು ನಟ್ಟಿರುಳೊಳಿನಲು ॥

೧೪. ಏನಿದಚ್ಚರಿ ನಿನ್ನ ತಂದೆಗ ।
ದೇನು ಕಾರಣವಿಲ್ಲದಕ್ಷಿಗ ।
ಳೇನುದಿಸಿದುವು ಸೊಕುಸೊಕಿನ್ನದಕೆ ಕಾರಣವ ॥

ನೀನರಿಯೆ ತಿಳಿದಿರ್ಪಳಿದ ನಿಜ |
ಮಾನಿನೀಮಣಿಯೆಂದು ಮುನಿಗಳು |
ಸಾನುರಾಗದೆ ನೋಡಿದರು ಸಾವಿತ್ರಿಯಾನನವ ||

೧೫. ಮುನಿವರರೆ, ಲಾಲಿಪುದು ನಿಮ್ಮಯ |
ಘನತರಾಶೀರ್ವಾದಬಲದಿಂ |
ದನವಧಿವಿಪತ್ಸಾಗರವನುತ್ತರಿಸಿದುದನೆಂದು ||
ಮುನಿಪನಾರದನುಕ್ತಿವೊಲು |
ಗಿನನ ಹರಣವ ಪಡೆದ ಕಥನವ |
ವಿನಯದಿಂ ತಲೆವಾಗಿ ಬಿನ್ನವಿಸಿದಳು ಸಾವಿತ್ರಿ ||

೧೬. ಎಲೆ ಪತಿವ್ರತೆ, ಭಾಪು ಸುವಿಪ |
ತ್ಜಲಧಿಮಗ್ನವದಾದ ಮಾನವ |
ಕುಲವನುದ್ಧರಿಸಿದೆಯದಲ್ಲದೆ ನಿನ್ನ ಪಿತೃಕುಲವ ||
ಸಲಹಿದೌ ನೀನಲ್ತೆ ಸದುಭಯ |
ಕುಲಸಮುದ್ಧಾರಿಣಿಯೆನುತ ಮಂ |
ಗಲಚರಿತ್ರೆಯಪೊಗಳಿದರುತಮತಮಗೆ ಮುನಿವರರು ||

೧೭. ನಲವು ಮಿಗಲಾ ಸತ್ಯವಂತನ |
ಲಲನೆಯನು ವರಸುತ್ತ ತನ್ನೃಪ |
ತಿಲಕನನುಬೆಸಗೊಂಡು ಪೋದರು ಮುನಿಗಳಾಶ್ರಮಕೆ |
ಬೆಳಗು ತಲೆದೋರಿದುದು ಮೂಡಲು |
ನಳಿನಸಖನೇರಿದನು ಪೂರ್ವಾ |
ಚಲದಶಿಖರವನ್ನೃಪತಿಯಭ್ಯುದಯವನುನೋಳ್ಪನೆನೆ ||

೧೮. ದಿನಪವುದಿಸಿದ ಬಳಿಕಲಾಮುನಿ |
ಜನರು ತಮ್ಮಯ ನಿತ್ಯಕರ್ಮಗ |
ಳನು ರಚಿಸಿ ಮೇಣಾದ್ಯುಮತ್ಸೇನಾವನೀಪತಿಯು ||
ಸನಿಹಕೈದುತ ಸತ್ಯವಂತನ |
ವನಿತೆ ಯನುಪಮ ಚರಿತೆಯನು ತಾಂ |
ಮನದಣಿಯೆ ಕೊಂಡಾಡುತಿರ್ದರು ಪರಮಹರ್ಷದಲಿ ||

೧೯. ಅರಸಲಾಲಿಪುದಿತ್ತ ಮಂತ್ರಿಗ |
ಳರಿಗಳನು ರಣಮುಖದಿ ಭಂಜಿಸಿ |
ಮರಳಿ ತಮ್ಮರಸನನು ರಾಜ್ಯದಿ ನೆಲೆಗೊಳಿಸಲೆಂದು ||
ಭರದಿ ಮೇಧ್ಯಾರಣ್ಯಕೈದಿದ |
ರರಸು ಗತದೃಶನೆಂದು ಬಗೆದರೆ |
ಧರೆಯೊಳಿವರಲೆ ರಾಜಭಕ್ತಿಧುರೀಣರಾದವರು ||

೨೦. ಅರಸನೆಡೆಗೈತಂದು ಕಣ್ಬಡೆ |
ದಿರುವ ತೆರನನು ಕಂಡು ಪಿರಿದ |
ಚ್ಚರಿಪಡುತ ಸಂತೋಷದಿಂದವನಂಘ್ರಿಯುಗಳಕ್ಕೆ ||
ಎರಗಿ ನಿಮ್ಮ ಕುಲಕ್ರಮಾಗತ |
ದರಸುತನವನು ಕೈಕೊಳಲು ನೀವ್ |
ಬರುವುದೆಂದಾಮಂತ್ರಿಗಳು ಬಿನ್ನೈಸಲೊಲವಿನಲಿ ||

೨೧. ಅಂದವರ ಸತ್ಕರಿಸಿ ಮಿಗೆ ಹೊ |
ನ್ನಂದಣವನೇರಲ್ಕೆ ನೇಮಿಸಿ |
ನಂದನನು ಮೊದಲಾದವರ ನೊಲವಿಂ ದ್ಯುಮತ್ಸೇನಂ ||

ಬಂದ ಮುನಿಜನದೊಡನೆ ಕನಕ ।
ಸ್ಯಂದನವನಡರ್ದತುಲವೈಭವ ।
ದಿಂದಪೊಕ್ಕನು ರಾಜಧಾನಿಯನಂಸ ಕೇಳಿಂದ ॥

೨೨. ಬಳಿಕಲಭಿಷೇಕಿಸಿದರಾತನ ।
ಕುಲಪುರೋಹಿತಸಚಿವಮುಖ್ಯರು ।
ಬಲುಹರುಷದಿಂ ಯೌವರಾಜ್ಯದಿ ಸತ್ಯವಂತನನು ॥
ನೆಲೆಗೊಳಿಸಲಾತಂಗೆ ತನ್ನಯ ।
ಲಲನೆಯುದರದಿ ಜನಿಸಿದರು ಮುಂ ।
ಜುಳಗುಣಾಕರರಾದ ನೂರ್ವರು ಪುತ್ರರತಿಬಲರು ॥

೨೩. ಜನಿಸಿದರು ಮೇಣಶ್ವಪತಿಗಂ ।
ತನಯಶತವಿಂತುಭಯಕುಲವನು ।
ಜನಕ ಕೇಳುದ್ಧರಿಸಿದಳು ಸುಚರಿತ್ರೆ ಸಾವಿತ್ರಿ ॥
ಅನಘವಾದೀಸಚ್ಚರಿತ್ರೆಯ ।
ಘನತರದ ಭಕ್ತಿಯೊಳು ಪಠಿಸಿದ ।
ಜನಕೆ ಸಿದ್ಧಿಪುದೀಹಿತಾರ್ಥಗಳೆಂದನಾಮುನಿಪ ॥

ಸಾವಿತ್ರಿಯ ಚರಿತ್ರೆ ಸಂಪೂರ್ಣ.

# ಕ್ಲಿಷ್ಟಪದಗಳ ಅರ್ಥ.

## ೧ ನೆಯ ಆಶ್ವಾಸ

| ಪದ್ಯಸಂಖ್ಯೆ. | ಪದಗಳು. ಅರ್ಥ. |
|---|---|
| ೧ | ಹೃದಯಾಬ್ಜಮಿತ್ರ-ಹೃದಯವೆಂಬ ಕಮಲಕ್ಕೆ ಸೂರ್ಯ |
| ೨ | ಆರೂರಹ-ಜನ್ಮಸ್ಥಾನವಾದ [ನಾದವನೆ |
| | ಜನಪದ-ದೇಶ |
| ೩ | ನಿಕಾಮವೆನೆ-ಅತಿಶಯವಾಗಿ |
| ,, | ನಿರತನು-ಆಸಕ್ತಿಯುಳ್ಳವನು |
| ,, | ಸೌಮನಸ್ಯ-ಒಳ್ಳೆಯ ಹೃದಯವುಳ್ಳವನು |
| ೪ | ಕರಂ-ಹೆಚ್ಚಾಗಿ |
| ೫ | ಸದ್ಗುಣಧಾಮ-ಒಳ್ಳೆಯ ಗುಣಗಳಿಂದ ಪ್ರಕಾಶವಾ |
| ೫ | ಆಯತವೆನಲು-ವಿಸ್ತಾರವಾಗಿ [ನಳು |
| ೭ | ಪರೇಂಗಿತಜ್ಞ-ಇತರರ ಊಹೆಗಳನ್ನು ತಿಳಿಯಬಲ್ಲವನು |
| ೮ | ವಿಮುಖನು-ಅದರಕಡೆ ತಿರುಗದವನು |
| ೯ | ಎಣೆ-ಸಮಾನ |
| ,, | ಅಸದಳ-ಅಶಕ್ಯ |
| ,, | ಕರುಣಾವಾಲೆ-ಕರುಣೆಗೆ ಪಾತಿಯಂತಿರುವ |
| ೧೦ | ಮಿಗೆ-ಅಧಿಕವಾಗಿ |

| ಪದ್ಯಸಂಖ್ಯೆ. | ಪದಗಳು. | ಅರ್ಥ. |
|---|---|---|
| ೧೦ | ವನಧಿ– | ಸಮುದ್ರ |
| ,, | ಅರಿದು– | ತಿಳಿದು |
| ,, | ಇನಿಯಳು– | ಪ್ರಿಯಳು |
| ,, | ಬೆಸಗೊಂಡನು– | ಪ್ರಶ್ನೆಮಾಡಿದನು |
| ,, | ದುಗುಡ– | ದುಃಖ |
| ,, | ಕಂಬನಿ– | ಕಣ್ಣೀರು |
| ೧೧ | ಆಂಪ– | ಧರಿಸುವ, ಕೊಡುವ |
| ೧೨ | ಅನಿತರೊಳಗೆ– | ಅಷ್ಟರೊಳಗೆ |
| ,, | ಅಣುಗ– | ಶಿಶು |
| ,, | ನೇಹ– | ಸ್ನೇಹ, ವಾತ್ಸಲ್ಯ |
| ,, | ಸೋಗಿಲು– | ಮಡಿಲು |
| ೧೩ | ವನಜಗಂಧಿ– | ಕಮಲದಹಾಗೆ, ಸುವಾಸನೆಯುಳ್ಳ |
| ,, | ಒರೆವುದು– | ಹೇಳುವುದು |
| ,, | ಆಮ್ನಾಯ– | ವೇದ |
| ೧೪ | ಸಂತೈಸಿಕೊಳ್ಳು– | ಸಮಾಧಾನಪಡಿಸಿಕೊ |
| ೧೫ | ಕಲ್ಪೋಕ್ತ– | ವೇದದಲ್ಲಿ ಹೇಳಿರುವ |
| ,, | ಉಕ್ತಕಾಲ– | ಹೇಳಿದವೇಳೆ |
| ,, | ನಿರಶನವ್ರತ– | ಉಪವಾಸ |
| ೧೬ | ನೇಮ– | ನಿಯಮ |
| ,, | ಸೋಮಕುಲಜ– | ಚಂದ್ರವಂಶದಲ್ಲಿ ಹುಟ್ಟಿದ |
| ೧೭ | ಎರಗಿದನು– | ನಮಸ್ಕರಿಸಿದನು |
| ೧೮ | ನಿಚ್ಚಲುಂ– | ಯಾವಾಗಲೂ |
| ,, | ಅಚ್ಚರಿಯ– | ಆಶ್ಚರ್ಯವನ್ನು |
| ೧೯ | ಈಯಬೇಕು– | ಕೊಡಬೇಕು |

| ಪದ್ಯಸಂಖ್ಯೆ. | ಪದಗಳು. | ಅರ್ಥ. |
| --- | --- | --- |
| ೧೯ | ಕಾಯಬೇಕು | ರಕ್ಷಿಸಬೇಕು |
| ೨೦ | ಸಲಿಸಿರುವೆನು | ಕೊಟ್ಟಿರುವೆನು |
| ೨೧ | ಈಪರಿ | ಈ ರೀತಿಯು |
| ೨೨ | ತೆರದಿ | ಹಾಗೆ |
| ,, | ಸಿತಪಕ್ಷ | ಶುಕ್ಲಪಕ್ಷ |
| ,, | ಹರಿಸಮಿಗೆ | ಹರ್ಷಹೆಚ್ಚಲು |
| ೨೩ | ನಲವಿನಿಂ | ಸಂತೋಷದಿಂದ |
| ,, | ಗೆಯ್ದನು | ಮಾಡಿದನು |
| ೨೪ | ತೊಳಗುವ | ಹೊಳೆಯುವ |
| ,, | ಅಣಕಿಪ | ಹಾಸ್ಯಮಾಡುವ |
| ,, | ಪೊಗರುಗುವ | ಕಾಂತಿಯನ್ನು ಚೆಲ್ಲುವ |
| ,, | ಚೆಂದುಟಿಯು | ಕೆಂಪಾದ ತುಟಿಯು |
| ,, | ಬಗೆಯೊಳು | ಮನಸ್ಸಿನಲ್ಲಿ |
| ,, | ಅಡಿಗಡಿಗೆ | ಪದೇಪದೇ, ಆಗಾಗ |
| ೨೫ | ತಣಿಯರು | ತೃಪ್ತಿಪಡರು |
| ,, | ಮಿಗೆ | ಹೆಚ್ಚಲು |
| ,, | ನೀಡಿ | ಕೊಟ್ಟು |
| ,, | ಹರುಷಗಡಲು | ಸಂತೋಷ ಸಮುದ್ರ |
| ,, | ಅಣುಗಿ | ಪುತ್ರಿ |
| ,, | ಮೂಡಿ | ಎದ್ದು |
| ೨೬ | ಅಖಿಳಕಳೆ | ಸಕಲ ವಿದ್ಯೆಗಳು |
| ,, | ಮನ್ನಣೆ | ಮರ್ಯಾದೆ |
| ,, | ಕುವರಿ | ಕುಮಾರಿ, ಮಗಳು |
| ೨೭ | ಅನುಗೊಳಿಸು | ಸೇರಿಸು |

| ಪದ್ಯಸಂಖ್ಯೆ. | ಪದಗಳು. | ಅರ್ಥ |
|---|---|---|
| ೨೭ | ಈವುದು | ಕೊಡುವುದು |
| ,, | ಕಲ್ಪಲತೆ | ಸ್ವರ್ಗದಲ್ಲಿ ಕೇಳಿದ್ದನ್ನು ಕೊಡುವ ಮರ |
| ೨೮ | ಒರೆದ | ಹೇಳಿದ |
| ,, | ಆಗ್ರಹಿಸಿದರೆ | ಸಿಟ್ಟುಮಾಡಿದರೆ |
| ೨೯ | ಅರಿದು | ಅಶಕ್ಯ |
| ,, | ಬಹುದು | ಬರುವುದು |
| ,, | ಮೇಲುಮತಿಗೆ | ಶ್ರೇಷ್ಠವಾದ ಬುದ್ಧಿಗೆ |
| ೩೦ | ಉಸಿರಿದ | ಹೇಳಿದ |
| ,, | ಆಲಿಸುವಳು | ಕೇಳುವಳು |
| ,, | ಭಾವಿಪಳು | ಯೋಚಿಸುವಳು |
| ,, | ಪರಿಪರಿಯ | ನಾನಾವಿಧವಾದ |
| ,, | ಎರಗುತಿಹ | ಮೇಲೆಹೋಗುವ ಆಸೆಪಡುವ |
| ,, | ಬಲುಹಿಂ | ಬಲಾತ್ಕಾರದಿಂದ |
| ೩೧ | ಇನಿಸು | ಸ್ವಲ್ಪವೂ |
| ,, | ಬೇಸರ | ಉದಾಸೀನತೆ, ಬೇಸರಿಕೆ |
| ,, | ಅನುದಿನವು | ನಿತ್ಯದಲ್ಲಿಯೂ |
| ೩೨ | ಮೇಲೆನಿಪ | ಅತಿಶಯವಾದ |
| ೩೩ | ಇನ್ನೇಂ | ಮತ್ತೇನು |
| ,, | ಒರೆವುವೆನೆ | ಹೇಳುವುವೋ ಎಂಬಹಾಗೆ |
| ,, | ಕುಂದಣ | ಚಿನ್ನ |
| ,, | ಏರುಂಜವ್ವನ | ಉಕ್ಕಿಬರುವ ಪ್ರಾಯ |
| ೩೪ | ನೆರೆ | ಚೆನ್ನಾಗಿ |
| ೩೫ | ತವಕ | ಕುತೂಹಲ, ಆಸೆ |
| ೩೬ | ತರಣಿ | ಸೂರ್ಯ |

| ಪದ್ಯಸಂಖ್ಯೆ. | ಪದಗಳು. | ಅರ್ಥ. |
|---|---|---|
| ೩೬ | ಮಿರುಗುತಿಹ | ಪ್ರಕಾಶಿಸುತ್ತಿರುವ |
| ,, | ಇರುವನು | ಸ್ಥಿತಿಯನ್ನು, ರೀತಿಯನ್ನು |
| ,, | ಇರದೆ | ನಿಲ್ಲದೆ |
| ,, | ಎಯ್ದಿದರು | ಗಮಿಸಿದರು |
| ೩೭ | ದಂದುಗ | ವ್ಯಾಕುಲತೆ, ಕಳವಳ |
| ,, | ಸಂಧಿಸಲು | ಒದಗಲು |
| ,, | ಮಿಂದು | ಸ್ನಾನಮಾಡಿ |
| ,, | ಎಸಗಿ | ಮಾಡಿ |
| ೩೮ | ಎಯ್ತಂದು | ಬಂದು |
| ,, | ಕೈಕೊಳ್ಳುವುದು | ಅಂಗೀಕರಿಸಬೇಕು |
| ೩೯ | ಸನಿಹ | ಸಮೀಪ |
| ,, | ಇಹ | ಇರುವ |
| ೪೦ | ಸೊಕ್ಕುಜವ್ವನೆ | ಯೌವನಗರ್ವಿತೆ |
| ,, | ಅಕಟಾ | ಅಯ್ಯೋ |
| ,, | ಏಗೆಯ್ವೆನು | ಏನುಮಾಡಲಿ |
| ,, | ಕಕ್ಕುಲತೆ | ವ್ಯಾಕುಲತೆ |
| ,, | ಅಕ್ಕರು | ಪ್ರೀತಿ |
| ,, | ಮನದೊಳಮೂಕ | ಮನದಲ್ಲಿ ಹುಟ್ಟಿದ |
| ೪೧ | ಅರಸುತಲಿ | ಹುಡುಕುತ |
| ,, | ಆಶಯ | ಆಸೆ |
| ,, | ಪರಿಣಯ | ಮದುವೆ |
| ೪೨ | ಆಹೆನು | ಆಗುವೆನು |
| ,, | ಅಳಿದ | ತೀರಿಹೋದ |
| ೪೩ | ಸಲಹದ | ಕಾಪಾಡದ |

| ಪದ್ಯಸಂಖ್ಯೆ. | ಪದಗಳು. | ಅರ್ಥ. |
|---|---|---|
| ೪೩ | ಸೊಲ್ಲಿಪರು | ಹೇಳುವರು |
| ,, | ಬಲ್ಲ | ತಿಳಿದ |
| ,, | ತಕ್ಕ | ಯೋಗ್ಯನಾದ |
| ,, | ಬಹ | ಬರುವ |
| ೪೪ | ಇತ್ತು | ಕೊಟ್ಟು |
| ,, | ಬೀಳ್ಕೊಡಲು | ಅಪ್ಪಣೆಕೊಟ್ಟು ಕಳುಹಿಸಲು. |
| ೪೫ | ಅಂತು | ಪಡೆದು |
| ೪೬ | ಎಡೆ | ಸ್ಥಲ, ಸ್ಥಾನ |
| ,, | ಅಗಣ್ಯವೆನೆ | ಲೆಕ್ಕಮಾಡುವುದಕ್ಕಾಗದಷ್ಟು |
| ,, | ಹಿರಣ್ಯ | ಚಿನ್ನ |
| ,, | ವರೇಣ್ಯ | ಶ್ರೇಷ್ಠ |
| ,, | ಲಾವಣ್ಯನಿಧಿ | ಹೆಚ್ಚಾದ ಕಾಂತಿಯುಳ್ಳ |

## ೨ ನೆಯ ಆಶ್ವಾಸ.

| | | |
|---|---|---|
| ಸೂಚನೆ | ಅನುಮತ | ಇಷ್ಟ |
| ೧ | ಅಂದ | ಚೆಂದ |
| ,, | ಒಡ್ಡೋಲಗ | ಸಭೆ, ದರ್ಬಾರು |
| ,, | ನಲವಿಂದ | ಸಂತೋಷದಿಂದ |
| ,, | ಅಂಬರ | ಆಕಾಶ |
| ,, | ನೀರದ | ಮೇಘ |
| ೨ | ಸತ್ಕರಿಸಿ | ಮರ್ಯಾದೆಮಾಡಿ |
| ,, | ಕಂಡುದರಿಂ | ಕಂಡದ್ದರಿಂದ |
| ೩ | ಲೇಸು | ಶ್ರೇಯಸ್ಸು |
| ೪ | ಪರಸು | ಹರಸು |

| ಪದ್ಯಸಂಖ್ಯೆ. | ಪದಗಳು. ಅರ್ಥ. |
|---|---|
| ೫ | ಆರೂಢ-ತಿಳಿಸು |
| ,, | ಈಗಳೆ-ಈವಾಗಲೇ |
| ,, | ಅನುರಾಗ--ಪ್ರೀತಿ |
| ೭ | ಸಂತಸ-ಸಂತೋಷ |
| ೮ | ಅನವರತ-ಯಾವಾಗಲೂ |
| ೯ | ಎಂದುಂ-ಯಾವಾಗಲೂ |
| ೧೧ | ಪೇಳ್ ಇನಿಸು-ಮತ್ತು ಸ್ವಲ್ಪವೂ |
| ,, | ಬೆಸಗೊಂಬೆನು- ಕೇಳಿಕೊಳ್ಳುವೆನು |
| ೧೪ | ವಿಷಾದ-ದುಃಖ |
| ೧೫ | ಅಳಿವನು-ಸಾಯುವನು |
| ೧೬ | ಬಗೆಯೆ-ಪರಿಭಾವಿಸಲು |
| ,, | ಮುಗುಳೆ—ಮತ್ತು |
| ೧೭ | ಒಮ್ಮೆ—ಒಂದಾವೃತ್ತಿ |
| ,, | ಮಾಳ್ಪುದು—ಮಾಡುವುದು |
| ೧೮ | ಪೊಡವಿ—ಪೃಥಿವಿ, ಭೂಮಿ |
| ,, | ಪಡಿ—ಸಮಾನ |
| ೧೯ | ಎನೆ---ಎಂದು ಹೇಳಲು |
| ,, | ಅನುಗೊಳಲಿ—ನೆರವೇರಲಿ |
| ೨೦ | ಚಳಕದಿಂದ—ಬೇಗನೆ |

## ೩ ನೆಯ ಆಶ್ವಾಸ.

| | |
|---|---|
| ಸೂಚನೆ | ಮುದದಿ—ಹರ್ಷದಿಂದ |
| ೧ | ಮೇಳವಿಸಿ—ಸೇರಿಸಿ |
| ,, | ಹೊರವಟ್ಟ—ಹೊರಟನು |

| ಪದ್ಯಸಂಖ್ಯೆ. | ಪದಗಳು. | ಅರ್ಥ. |
|---|---|---|
| ೭ | ಗಹನ | ಕಾಡು |
| ,, | ಯೋಗಿಧರ್ಮ್ಮದಿ | ಯೋಗಿಯ ಹಾಗೆ |
| ೮ | ಅಂತರಾಯ | ವಿಘ್ನ |
| ೯ | ನೆಲೆ | ಸ್ಥಿರ |
| ೧೧ | ಒಲಿದು | ಒಪ್ಪಿ |
| ,, | ಅಳಲುವ | ದುಃಖಪಡುವ |
| ೧೨ | ಸಲಿಸಬೇಕು | ಮಾಡಬೇಕು |
| ೧೩ | ಕೊಳುಕೊಡೆ | ಹೆಣ್ಣು ಕೊಟ್ಟುತರುವುದು |
| ,, | ಎಳಸಿರುವೆನು | ಇಚ್ಛೈಸಿರುವೆನು |
| ,, | ಅಳವಡು | ಅನುಕೂಲಿಸು |
| ೧೪ | ಬಂಧುತೆ | ಬಂಧುತ್ವ, ನಂಟುತನ |
| ೧೫ | ಘೂರ್ಮ್ಮಿಸು | ಘೂರ್ಮೆಂದು ತುಂಬಿಕೊಳ್ಳು |
| ೧೬ | ಅನಿತು | ಅಷ್ಟು |
| ೧೭ | ಮುಡಿ | ತಲೆ |
| ೧೮ | ಅಲಸದೆ | ಬೇಸರಗೊಳ್ಳದೆ |
| ೧೯ | ಸ್ಮೃತಿ | ಜ್ಞಾಪಕ, ನೆನಹು |
| ೨೦ | ತಳರ್ವೆನು | ಹೊರಡುವೆನು |
| ೨೧ | ಉಡಿಗೆ | ಬಟ್ಟೆ, ತೊಡಿಗೆ—ಒಡವೆ |
| ೨೨ | ಉರುತರದ | ಹೆಚ್ಚಾದ |
| ೨೩ | ಐಸಿರಿ | ಐಶ್ವರ್ಯ |
| ೨೫ | ಎಲೆವನೆ | ಪರ್ಣಶಾಲೆ, ಗುಡಿಸಲು |
| ೨೭ | ದೊರೆದರೆ | ಪಡೆದರೆ |
| ೨೯ | ಓಪ | ಪತಿ, ಗಂಡ |
| ,, | ಗೋಪನ | ಕಾಪಾಡುವಿಕೆ |

ಪದ್ಯಸಂಖ್ಯೆ ಪದಗಳು ಅರ್ಥ.

೩೧ ಅಣತಿ—ಆಜ್ಞೆ

## ೪ ನೆಯ ಆಶ್ವಾಸ.

ಸೂಚನೆ ಏಣಲೋಚನೆ—ಜಿಂಕೆಯ ಹಾಗೆ ಚಂಚಲವಾದ [ಕಣ್ಣುಳ್ಳವಳು

೧ ಇನ—ಪತಿ

,, ಅಳಿವ—ಮರಣವನ್ನು

೨ ಎಸಗಲ್—ಮಾಡಲು

೩ ಅಪೆಯ—ಬಲ್ಮೆಯ, ಶಕ್ತಿಯುಂಟೆ

೪ ಬಿರುವಿಸಿಲು—ವೇಗವಾದ ಬಿಸಿಲು

,, ಬೇಗೆಯುಪಟಳ—ತಾಪದ ಹಿಂಸೆ

೬ ಹರಕೆ—ಆಶೀರ್ವಾದ

೮ ಅಳಲು—ದುಃಖ

೯ ಪರಶು—ಕೊಡಲಿ

,, ವಹಿಲದಲಿ—ಬೇಗನೆ

,, ಪೊರಮಡಲು—ಹೊರಡಲು

೧೦ ಮಾಣದೆ—ಬೇಡವೆಂದು ಹೇಳದೆ

೧೧ ಮಿಹಿರ—ಸೂರ್ಯ

೧೨ ಹಿರಿದು—ಹೆಚ್ಚಾಗಿ

೧೩ ಓಸರಿಸಬೇಡ—ಹಿಂಜರಿಯಬೇಡ

,, ಕಡೆಗಣಿಸಬೇಡ—ತಿರಸ್ಕರಿಸಬೇಡ

೧೬ ಎನುವ—ಹೇಳುವ

೧೯ ಅಣಿಯರದಿ—ಮನೋಹರವಾಗಿ

,, ತಿಂತಿಣಿ—ಗುಂಪು

೨೦ ನಳನಳಿಪ—ಕೋಮಲವಾದ

| ಪದ್ಯಸಂಖ್ಯೆ | ಪದಗಳು. | ಅರ್ಥ. |
|---|---|---|
| ೨೦ | ಬಗೆಗೊಳುವ | ಮನೋಹರವಾದ |
| ೨೧ | ಕಂಗೊಳಿಪ | ಕಣ್ಣನ್ನು ಸೆಳೆಯುವ, ಸೊಗಸಾದ |

## ೫ ನೆಯ ಆಶ್ವಾಸ.

| | | |
|---|---|---|
| ಸೂಚನೆ | ಅಮಮ | ಆಶ್ಚರ್ಯ |
| ೧ | ಆಯಸ | ಆಯಾಸ, ಬಳಲಿಕೆ |
| ೩ | ಕರಾಳಕಾಲ | ಭಯಂಕರನಾದ ಯಮ |
| ೪ | ಪೊರೆ | ಸಮೀಪ |
| ೫ | ಘಳಿಲನೆ | ಬೇಗನೆ |
| ೬ | ಮಹಿತೆ | ಮಹಿಮೆಯುಳ್ಳವಳು |
| ,, | ನೆಲೆಯ | ನಿಜಸ್ಥಿತಿಯನ್ನು |
| ೭ | ನನ್ನಿಯಿಂ | ನಿಜವಾಗಿ |
| ೮ | ಬಲುಹು | ಹಟ |
| ೧೦ | ಮರುಗುತ | ದುಃಖಿಸುತ |
| ,, | ಬೆಂಬಳಿ | ಹಿಂಭಾಗ |
| ,, | ಬಹಳವು | ಬರುವವಳನ್ನು |
| ೧೪ | ನೆರವಿ | ಗುಂಪು |
| ,, | ಜೀವಿ | ಮನುಷ್ಯ |
| ೨೨ | ಧಾಮನಿಧಿಜ | ಸೂರ್ಯನ ಮಗ |
| ೨೫ | ಸೂರ | ಸೂರ್ಯ |
| ೨೬ | ಸಲ್ವುದು | ಒಪ್ಪುವುದು |
| ೩೨ | ಅಹವು | ಆಗುವುವು |
| ೩೩ | ಜವ | ಯಮ |
| ೩೪ | ಎರೆಯೆನು | ಯಾಚಿಸುವುದಿಲ್ಲ |

| ಪದ್ಯಸಂಖ್ಯೆ. | ಪದಗಳು. ಅರ್ಥ. |
|---|---|
| ೩೭ | ಅರುಜ–ರೋಗವಿಲ್ಲದವನು |

## ೬ ನೆಯ ಆಶ್ವಾಸ.

| | |
|---|---|
| ಸೂಚನೆ | ಜವದಿಂ–ವೇಗವಾಗಿ |
| ,, | ವಂಡದಿ–ಹೆಂಡತಿ |
| ೧ | ಡಿಂಬ–ಶವ |
| ೨ | ಅಂಕ–ಮಡಿಲು |
| ೩ | ಹದನ–ಕ್ರಮ |
| ,, | ಕುದಿವರು–ಸಂಕಟಪಡುವರು |
| ,, | ಎಂತೋ–ಹೇಗೋ, ಎಷ್ಟೋ |
| ೫ | ಪುದಿದು–ವ್ಯಾಪ್ತವಾಗಿ ತುಂಬಿ |
| ೮ | ತಳುವಿದರೆ–ತಡೆಮಾಡಿದರೆ |
| ,, | ಹಗರಣ–ಗದ್ದಲ, ಕೋಟಲೆ |
| ,, | ಅಳುಕುತ–ಹೆದರುತ |
| ೯ | ಬೇಗುದಿ–ಸಂತಾಪ |
| ೧೦ | ದಂದುಗ–ದುಃಖ |
| ೧೧ | ಉಗುವ–ಸುರಿವ |
| ೧೩ | ಉಳಿ–ಬಿಡು |
| ೧೫ | ಸವನಿಸಿ–ಸರಿಮಾಡಿ |
| ೧೭ | ಹತಿ–ಪೆಟ್ಟು |
| ೧೮ | ತವಕ–ಆತುರ |
| ,, | ನಟ್ಟಿರುಳು–ಮಧ್ಯರಾತ್ರಿ |

## ೭ ನೆಯ ಆಶ್ವಾಸ.

| | |
|---|---|
| ಸೂಚನೆ | ಬಾಳ್ದಳು–ಬಾಳಿದಳು |

| ಪದ್ಯಸಂಖ್ಯೆ. | ಪದಗಳು. | ಅರ್ಥ. |
|---|---|---|
| ೨ | ಪರಿಸರ | ಹತ್ತಿರ |
| ,, | ಹಂಬಲಿಸಿ | ಹೆಚ್ಚಾಗಿ ದುಃಖಿಸಿ |
| ೩ | ತೊಳಲುವರು | ಸುತ್ತುವರು |
| ೬ | ಮರುಕ | ಕರುಣ |
| ೮ | ಸುನಿಮಿತ್ತ | ಒಳ್ಳೆಯ ಶಕುನ |
| ೯ | ಉಕ್ಕಂದ | ನೆಲಹ, ಇಲ್ಲಿ, ಆಧಾರ |
| ,, | ಮಾಕಂದ | ಮಾವಿನಮರ |
| ,, | ಇರ್ಕೈ | ಎರಡು ಕೈಗಳು |
| ,, | ತಕ್ಕೈಸಿ | ಅಪ್ಪಿಕೊಂಡು |
| ೧೧ | ಸಮರ್ಚೆ | ಪೂಜೆ |
| ೧೩ | ಸುಷುಪ್ತಿ | ನಿದ್ರೆ |
| ೧೪ | ಸನಿಹ | ಸಮೀಪ |
| ೧೯ | ಧುರೀಣರು | ಭಾರವನ್ನು ಹೊತ್ತವರು, ಸಮರ್ಥ |
| ೨೧ | ಹೊನ್ನಂದಣ | ಚಿನ್ನದ ಪಾಲಕಿ |
| ,, | ಸ್ಯಂದನ | ರಥ |
| ,, | ಅಡರ್ | ಏರಿ |
| ೨೩ | ಈಹಿತಾರ್ಥ | ಇಷ್ಟಾರ್ಥ |